ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೮೪

**ಪಟ್ಟಿ – ೩**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತಮೂರನೆಯ ಅಧಿವೇಶನ**

**ಗುರುವಾರ, ದಿನಾಂಕ : ೦೯ನೇ ಫೆಬ್ರವರಿ, ೨೦೧೭**

---

**ಸಮೂಹ – IV**

೧. ಮುಖ್ಯಮಂತ್ರಿಗಳು.

೨. ಗೃಹ ಸಚಿವರು.

೩. ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು.

೪. ನಗರಾಭಿವೃದ್ಧಿ ಹಾಗೂ ಹಜ್ ಸಚಿವರು.

---

## ೩೭೧(ಜೆ) ಅಡಿಯ ಕರ್ನಾಟಕ ಸಾರ್ವಜನಿಕ ಉದ್ಯೋಗ ಆದೇಶ ಹಾಗೂ ಸೌಲಭ್ಯಗಳ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೧೯೫ (೨೯) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೩೭೧(ಜೆ) ಅಡಿಯ ಕರ್ನಾಟಕ ಸಾರ್ವಜನಿಕ ಉದ್ಯೋಗ ಆದೇಶ ೨೦೧೩ರ ೧೨ಎ, ೧೩ಎ ಹಾಗೂ ೧೩ಬಿ ಅನ್ವಯ ಕಲ್ಪಿಸಲಾದ ಸೌಲಭ್ಯಗಳು ಯಾವುವು ; ಪ್ರತ್ಯೇಕ ಮಾಹಿತಿ ನೀಡುವುದು ಹಾಗೂ ಈ ಮೇಲ್ಕಂಡ ೧೨ಎ, ೧೩ಎ ಹಾಗೂ ೧೩ಬಿ ಅನ್ವಯ ಸರಕಾರ ಕೈಗೊಂಡ ಕ್ರಮಗಳೇನು ; (ಸಂಪೂರ್ಣ ವಿವರ ನೀಡುವುದು)

(ಆ) ೩೭೧(ಜೆ) ಅಡಿಯ ಕರ್ನಾಟಕ ಸಾರ್ವಜನಿಕ ಉದ್ಯೋಗ ಆದೇಶ ೨೦೧೩ರ ೧೨ಎ, ೧೩ಎ ಹಾಗೂ ೧೩ಬಿ ಅನ್ವಯ ೪ ವರ್ಷ ಗತಿಸಿದರೂ ಸೌಲಭ್ಯಗಳನ್ನು ಒದಗಿಸುವಲ್ಲಿ ವಿಫಲವಾಗಿ ೩೭೧(ಜೆ) ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿರುವುದಕ್ಕೆ ಕಾರಣಗಳೇನು ; (ವಿವರ ನೀಡುವುದು)

(ಇ) ಹೈದ್ರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಆದೇಶ ೨೦೧೩ರ ಅಡಿಯಲ್ಲಿರುವ ೧೨ಇ ಹಾಗೂ ೫ (೧) (೩) (೪) ಹಾಗೂ ೨೨(೨) (ಇ), (ಜಿ)ರ ಕಂಡಿಕೆಗಳ ಅಡಿಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪನೆ ಮಾಡಲು ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಮೂಲ ಸೌಕರ್ಯ ಹಾಗೂ ಶೈಕ್ಷಣಿಕ ಅಭಿವೃದ್ಧಿಗಾಗಿ ಅನುದಾನವನ್ನು ಒದಗಿಸುವ ಅವಕಾಶಗಳಿರುವುದು

ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸದರಿ ಕಂಡಿಕೆಗಳ ಅಡಿಯಲ್ಲಿ ಸರ್ಕಾರ/ ಮಂಡಳಿ ಕೈಗೊಂಡ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)

(ಈ) ಮೇಲ್ಕಂಡ ಕಂಡಿಕೆಗಳಲ್ಲಿ ನೀಡಿದ ಅವಕಾಶದಂತೆ ಹೈದ್ರಾಬಾದ್, ಕರ್ನಾಟಕ ಭಾಗದಲ್ಲಿ ಶಿಕ್ಷಣಕ್ಕೆ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ನೀಡಲು ಸರ್ಕಾರ/ಮಂಡಳಿ ಮುಂದಾಗುವುದೇ ; ಇದ್ದರೆ, ಸರ್ಕಾರದ ಮುಂದಿನ ಯೋಜನೆಗಳೇನು ? (ಮಾಹಿತಿ ನೀಡುವುದು)

## ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ /ಅರೆಸರ್ಕಾರಿ ಇಲಾಖೆಗಳ ಬಗ್ಗೆ.

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):-**

೧೯೬ (೩೦೦) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಹೈದ್ರಾಬಾದ್-ಕರ್ನಾಟಕ ಭಾಗದ ೬ ಜಿಲ್ಲೆಗಳು ಹಾಗೂ ಹರಪನಹಳ್ಳಿ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ/ ಅರೆ ಸರ್ಕಾರಿ ಇಲಾಖೆಗಳು ಯಾವುವು ; (ಜಿಲ್ಲಾವಾರು, ಇಲಾಖಾವಾರು ಮಾಹಿತಿ ನೀಡುವುದು)

(ಆ) ಹೈದ್ರಾಬಾದ್-ಕರ್ನಾಟಕ ಭಾಗದ ೬ ಜಿಲ್ಲೆಗಳು ಹಾಗೂ ಹರಪನಹಳ್ಳಿ ತಾಲ್ಲೂಕಿನಲ್ಲಿ ಕಳೆದ ೨೦೧೫-೧೬ನೇ ವರ್ಷದಿಂದ ಖಾಲಿ ಇರುವ ಹುದ್ದೆಗಳೆಷ್ಟು; (ಜಿಲ್ಲಾವಾರು, ಇಲಾಖಾವಾರು ಮಾಹಿತಿ ನೀಡುವುದು)

(ಇ) ಹೈದ್ರಾಬಾದ್–ಕರ್ನಾಟಕ ಭಾಗದ ೬ ಜಿಲ್ಲೆಗಳು ಹಾಗೂ ಹರಪನಹಳ್ಳಿ ತಾಲ್ಲೂಕಿನಲ್ಲಿ ಕಳೆದ ೨೦೧೫–೧೬ನೇ ವರ್ಷದಿಂದ ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಮಾಡಲಾಗಿದೆಯೇ? (ಇದ್ದರೆ, ಜಿಲ್ಲಾವಾರು, ಇಲಾಖಾವಾರು, ಹುದ್ದೆವಾರು ಮಾಹಿತಿ ನೀಡುವುದು)

## ೩೭೧ (ಜೆ) ಅನುಷ್ಠಾನಗೊಳಿಸುವ ಸಲುವಾಗಿ ರಚಿಸಲಾದ "ಸಚಿವ ಸಂಪುಟ ಉಪಸಮಿತಿಯ" ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೧೯೭ (೩೦೧) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದ್ರಾಬಾದ್ ಕರ್ನಾಟಕ ಸಂವಿಧಾನದ ೩೭೧ (ಜೆ) ಅನುಷ್ಠಾನಗೊಳಿಸುವ ಸಲುವಾಗಿ ರಚಿಸಲಾದ ಸಚಿವ ಸಂಪುಟದ ಉಪಸಮಿತಿ ಎಷ್ಟು ಬಾರಿ ಸಭೆಗಳನ್ನು ಜರುಗಿಸಿದೆ ; ಯಾವ ಯಾವ ನಿರ್ಣಯಗಳನ್ನು ಕೈಗೊಂಡಿದೆ ; ಹಾಗೂ ಮೂಲ ೩೭೧ (ಜೆ) ಗೆ ತಿದ್ದುಪಡಿಗಳೇನಾದರೂ ತರಲಾಗಿದೆಯೇ ; (ದಾಖಲೆಗಳೊಂದಿಗೆ ಸಂಪೂರ್ಣ ವಿವರ ನೀಡುವುದು)

(ಆ) ಸದರಿ ನಿರ್ಣಯಗಳು ಹಾಗೂ ತಿದ್ದುಪಡಿಗಳಿಗೆ ವಿಧಾನ ಮಂಡಲದಲ್ಲಿ ಹಾಗೂ ರಾಜ್ಯಪಾಲರ ಅನುಮೋದನೆ ಪಡೆಯಲಾಗಿದೆಯೇ ; ದಾಖಲೆಗಳೊಂದಿಗೆ ವಿವರ ನೀಡುವುದು;

(ಇ) ಈಗಲಾದರೂ ಸರ್ಕಾರ ಕಲಂ ೩೭೧ (ಜೆ) ಅನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಂಪುಟದ

ಉಪಸಮಿತಿಗೆ ಈ ಭಾಗದ ಸಚಿವರನ್ನು ನೇಮಿಸಲು ಹಾಗೂ ೩೭೧ (ಜೆ) ಕೋಶವನ್ನು ಬೆಂಗಳೂರಿನಿಂದ ಕಲಬುರಗಿಗೆ ಸ್ಥಳಾಂತರಿಸಲು ಸರ್ಕಾರ ಮುಂದಾಗುವುದೇ ? (ಸಂಪೂರ್ಣ ವಿವರ ನೀಡುವುದು)

## ಕಲಬುರಗಿ ಮಹಾನಗರಕ್ಕೆ ಯು.ಜಿ.ಡಿ. (ಒಳಚರಂಡಿ) ಯೋಜನೆಯ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೧೯೮ (೩೦೩) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಮಹಾನಗರಕ್ಕೆ ಯು.ಜಿ.ಡಿ (ಒಳಚರಂಡಿ) ಯೋಜನೆ ಕೈಗೊಳ್ಳಲಾಗಿದೆಯೇ ; ಹಾಗಿದ್ದಲ್ಲಿ, ಯೋಜನೆ ಸಮೀಕ್ಷೆಯ ವರದಿ, ಉದ್ದಳತೆ ಹಾಗೂ ಯೋಜನಾ ವೆಚ್ಚ ನಕಾಶೆಗಳೊಂದಿಗೆ ನೀಡುವುದು ;

(ಆ) ಸದರಿ ಯು.ಜಿ.ಡಿ. (ಒಳಚರಂಡಿ) ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಆದಂತಹ ಕಾಮಗಾರಿಗಳ ಉದ್ದಳತೆ ಎಷ್ಟು ಹಾಗೂ ಇದಕ್ಕಾಗಿ ಮಾಡಿದ ವೆಚ್ಚ ಎಷ್ಟು ; (ಮಾಹಿತಿ ನೀಡುವುದು)

(ಇ) ಮಹಾನಗರದ ಯಾವ ಯಾವ ಬಡಾವಣೆಗಳು ಈ ಯೋಜನೆಯ ವ್ಯಾಪ್ತಿಯಲ್ಲಿ ತರಲಾಗಿದೆ ಹಾಗೂ ಸದರಿ ಯೋಜನೆಯ ವ್ಯಾಪ್ತಿಯಲ್ಲಿ ಬಾರದೆ ಇರುವ ಬಡಾವಣೆಗಳು ಯಾವುವು ; (ಮಾಹಿತಿ ನೀಡುವುದು)

(ಈ) ಕಲಬುರಗಿ ಮಹಾನಗರಕ್ಕೆ ೨೪x೭ ಕುಡಿಯುವ ನೀರಿನ ಯೋಜನೆ ಕೈಗೊಳ್ಳಲಾಗಿದೆಯೇ ; ಹಾಗಿದ್ದರೆ, ಯೋಜನೆಯ ವಿವರ ನೀಡುವುದು ; ಹಾಗೂ ಇಲ್ಲಿಯವರೆಗೆ ಆದಂತಹ ಕಾಮಗಾರಿಗಳ ವಿವರ, ವೆಚ್ಚದ ಸಂಪೂರ್ಣ ಮಾಹಿತಿ ನೀಡುವುದು?

## ಬೆಳಗಾವಿ, ಮೈಸೂರು ಹಾಗೂ ಬೆಂಗಳೂರು ವಿಭಾಗದಲ್ಲಿ ೩೭೧(ಜೆ) ಅಡಿಯಲ್ಲಿ ಶೇ. ೮% ರಷ್ಟು ಮೀಸಲಾತಿ ನೀಡುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೧೯೯ (೩೦೨) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಬೆಳಗಾವಿ, ಮೈಸೂರು ಹಾಗೂ ಬೆಂಗಳೂರು ವಿಭಾಗದಲ್ಲಿ ಸಂವಿಧಾನ ೩೭೧(ಜೆ) ಅಡಿಯಲ್ಲಿ ಶೇ.೮% ರಷ್ಟು ಮೀಸಲಾತಿ ಪ್ರಕಾರ ಆದ ನೇಮಕಾತಿಗಳು ಎಷ್ಟು ಹಾಗೂ ಇವಿಧ ಇಲಾಖೆಗಳಲ್ಲಿ ಆದ ಬಡ್ತಿಗಳು ಎಷ್ಟು ; (ಇಲಾಖಾವಾರು, ವಿಭಾಗಾವಾರು ಸಂಪೂರ್ಣ ವಿವರ ನೀಡುವುದು)

(ಆ) ಹೈದ್ರಾಬಾದ್ ಕರ್ನಾಟಕ ಪ್ರದೇಶ ಹೊರತುಪಡಿಸಿ ೩೭೧ (ಜೆ) ಅಡಿಯಲ್ಲಿ ರಾಜ್ಯದ ಇತರೆ ವಿಭಾಗಗಳಲ್ಲಿ ೩೭೧(ಜೆ) ಆಶಯ ಪ್ರಕಾರ ನೇಮಕಾತಿ ಹಾಗೂ ಮುಂಬಡ್ತಿಗಳಲ್ಲಿ ಶೇ. ೮% ರಷ್ಟು ಮೀಸಲಾತಿ ಕಲ್ಪಿಸದೆ ಇದ್ದಲ್ಲಿ ಕಾರಣಗಳೊಂದಿಗೆ ಸಂಪೂರ್ಣ ವಿವರ ನೀಡುವುದು ;

(ಇ) ಹೈದ್ರಾಬಾದ್ ಕರ್ನಾಟಕ ಪ್ರದೇಶ ಹೊರತುಪಡಿಸಿ ೩೭೧ (ಜೆ) ಅಡಿಯಲ್ಲಿ ರಾಜ್ಯದ ಇತರೆ ವಿಭಾಗಗಳಲ್ಲಿ ೩೭೧(ಜೆ) ಆಶಯ ಪ್ರಕಾರ ನೇಮಕಾತಿ ಹಾಗೂ ಮುಂಬಡ್ತಿಗಳಲ್ಲಿ ಶೇ. ೮% ರಷ್ಟು

ಮೀಸಲಾತಿಯಲ್ಲಿ ಗೊಂದಲ ಸೃಷ್ಟಿಯಾಗಿ ನ್ಯಾಯಾಲಯದಲ್ಲಿ ವ್ಯಾಜ್ಯ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದ್ದರೆ, ಸರ್ಕಾರ ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು ಹಾಗೂ ಪ್ರಸ್ತುತ ವ್ಯಾಜ್ಯ ಯಾವ ಹಂತದಲ್ಲಿದೆ ; (ವಿವರ ನೀಡುವುದು)

(ಈ) ಸದರಿ ೩೭೧ (ಜೆ) ಅಡಿಯಲ್ಲಿರುವಂತಹ ಶೇ. ೮% ರಷ್ಟು ಮೀಸಲಾತಿ ಗೊಂದಲಗಳನ್ನು ನಿವಾರಣೆ ಮಾಡಲು ಸರ್ಕಾರ ಸಂವಿಧಾನದಲ್ಲಿ ತಿದ್ದುಪಡಿ ತರಲು ಮುಂದಾಗುವುದೇ; ಹಾಗಿದ್ದರೆ, ವಿಧಾನಸಭೆಯಲ್ಲಿ ಹಾಗೂ ಸಂಸತ್ ಸದನದಲ್ಲಿ ತಿದ್ದುಪಡಿ ತರಲು ಕ್ರಮ ಕೈಗೊಳ್ಳುವುದೇ ? (ವಿವರ ನೀಡುವುದು)

## ಬೆಂಗಳೂರು ಮಹಾನಗರ ಪಾಲಿಕೆ ತೆರಿಗೆ ಬಗ್ಗೆ

**ಶ್ರೀ ಎನ್. ಅಪ್ಪಾಜಿ ಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೦ (೩೧೧) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ವಾಣಿಜ್ಯ ಮಳಿಗೆಗಳ ಒಟ್ಟು ಸಂಸ್ಥೆ ಎಷ್ಟು ; (ವಾರ್ಡ್‌ವಾರು ವಾಣಿಜ್ಯ ಮಳಿಗೆಗಳ ವಿವರ ನೀಡುವುದು)

(ಆ) ವಾಣಿಜ್ಯ ಮಳಿಗೆಗಳ ತೆರಿಗೆಯನ್ನು ಸರ್ಕಾರಕ್ಕೆ ಸಕಾಲದಲ್ಲಿ ಪಾವತಿಸಲು ಕ್ರಮ ಕೈಗೊಳ್ಳಲಾಗಿದೆಯೇ ; ಹಾಗಿದ್ದಲ್ಲಿ ಇದರಿಂದ ಬರುವ ಆದಾಯದ ಮೊತ್ತವೆಷ್ಟು ;

(ಇ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ/ ನೌಕರರುಗಳು ತೆರಿಗೆ ವಸೂಲಿಯಲ್ಲಿ ಅವ್ಯವಹಾರ ಮಾಡಿದ್ದಲ್ಲಿ, ಕೈಗೊಂಡ ಕ್ರಮವೇನು ; (ವಿವರ ನೀಡುವುದು)

(ಈ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಇದುವರೆವಿಗೂ ಮಾಡಿರುವ ಸಾಲದ ಮೊತ್ತವೆಷ್ಟು? (ವಿವರ ನೀಡುವುದು)

## ಗ್ರೂಪ್ "ಎ" ಮತ್ತು "ಬಿ" ಹುದ್ದೆ ನೇಮಕಾತಿ ಬಗ್ಗೆ

**ಶ್ರೀ ಎನ್. ಅಪ್ಪಾಜಿ ಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೧ (೩೧೨) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ಲೋಕಸೇವಾ ಆಯೋಗದಿಂದ ಹಾಲಿ ಖಾಲಿ ಇರುವ ಗ್ರೂಪ್ "ಎ" ಮತ್ತು "ಬಿ" ಪ್ರೊಬೇಷನರ್ಸ್ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಯಾವಾಗ ಅಧಿಸೂಚನೆ ಹೊರಡಿಸಲಾಗುವುದು; (ಮಾಹಿತಿ ನೀಡುವುದು)

(ಆ) ಹಾಲಿ ಖಾಲಿ ಇರುವ ಗ್ರೂಪ್ "ಎ" ಮತ್ತು "ಬಿ" ಹುದ್ದೆಗಳಾವುವು; (ವಿವರ ನೀಡುವುದು)

(ಇ) ಈ ಹುದ್ದೆಗಳಿಗೆ ಪರೀಕ್ಷೆ ಯಾವಾಗ ನಡೆಸಲು ತೀರ್ಮಾನಿಸಲಾಗಿದೆ; (ಮಾಹಿತಿ ನೀಡುವುದು)

(ಈ) ಹೊಸ ಸಮಿತಿಯ ಶಿಫಾರಸ್ಸಿನಂತೆ ಈ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದೆ; ಸಂದರ್ಶನದ ಅಭ್ಯರ್ಥಿಗಳ ಅನುಪಾತವೇನು ? (ವಿವರ ನೀಡುವುದು)

# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ನ್ಯಾಯಾಲಯಕ್ಕೆ ಅಫೀಲು ಸಲ್ಲಿಸದಿರುವ ಬಗ್ಗೆ

**ಶ್ರೀ ಎನ್. ಅಪ್ಪಾಜಿ ಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೦೨ (೩೧೩) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಡಾವಣೆಗಳ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ೨೦೦೮ರಿಂದ ಇಲ್ಲಿಯವರೆಗೂ ಇದ್ದಂತಹ ದಾವೆಗಳೆಷ್ಟು ; (ಬಡಾವಣೆವಾರು, ಸರ್ವೆ ನಂಬರ್ ಮತ್ತು ಭೂಮಾಲೀಕರ ಹೆಸರುವಾರು ವಿವರ ನೀಡುವುದು)

(ಆ) ಈ ದಾವೆಗಳಲ್ಲಿ ಪ್ರಾಧಿಕಾರದ ಪರವಾಗಿ ಇತ್ಯರ್ಥಗೊಂಡಿರುವ ಪ್ರಕರಣಗಳೆಷ್ಟು ; ಭೂಮಾಲೀಕರ ಪರವಾಗಿ ಇತ್ಯರ್ಥಗೊಂಡಿರುವ ಪ್ರಕಣಗಳೆಷ್ಟು ; ಯಾವ ಯಾವ ನ್ಯಾಯಾಲಯಗಳಲ್ಲಿ ಪ್ರಕರಣಗಳು ಯಾವ ದಿನಾಂಕಗಳಂದು ಇತ್ಯರ್ಥಗೊಂಡಿವೆ ; (ಮಾಹಿತಿ ನೀಡುವುದು)

(ಇ) ಭೂಮಾಲೀಕರ ಪರವಾಗಿ ಇತ್ಯರ್ಥಗೊಂಡಿರುವ ಪ್ರಕರಣಗಳ ವಿರುದ್ಧ ಪ್ರಾಧಿಕಾರದಿಂದ ಅಫೀಲು ಸಲ್ಲಿಸಿರುವ ಪ್ರಕರಣಗಳೆಷ್ಟು;

(ಈ) ಅಫೀಲು ಸಲ್ಲಿಸುವುದಕ್ಕೆ ಅವಕಾಶವಿದ್ದರೂ ಅಫೀಲು ಸಲ್ಲಿಸದೇ ಇರುವ ಪ್ರಕರಣಗಳೆಷ್ಟು ; ಅಫೀಲು ಸಲ್ಲಿಸದೇ ಭೂಮಾಲೀಕರಿಗೆ ನಿರಾಕ್ಷೇಪಣಾ ಪತ್ರ (NOC) ನೀಡಿರುವ ಪ್ರಕರಣಗಳೆಷ್ಟು ; ಹಾಗಿದ್ದಲ್ಲಿ, ಕಾರಣಗಳೇನು ;

(ಉ) ಭೂಮಾಲೀಕರಿಗೆ ನಿರಾಕ್ಷೇಪಣಾ ಪತ್ರ (NOC) ನೀಡಲು ಪ್ರಾಧಿಕಾರದ ಆಯುಕ್ತರು, ಉಪ ಆಯುಕ್ತರು (ಭೂ) ಮತ್ತು ಕಾನೂನು ಅಧಿಕಾರಿಗಳ ಅಭಿಪ್ರಾಯ ಪಡೆಯಲಾಗಿದೆಯೇ ? (ಅಭಿಪ್ರಾಯ ಪಡೆದಿರುವ ದಾಖಲಾತಿಗಳ ಪ್ರತಿ ನೀಡುವುದು)

## ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಾಲದ ಬಗ್ಗೆ

**ಶ್ರೀ ಎನ್. ಅಪ್ಪಾಜಿ ಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೩ (೩೧೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮದ್ದೂರು ತಾಲ್ಲೂಕು ಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಕೇಂದ್ರ ಸರ್ಕಾರದ ೨೦೦೮ ಮತ್ತು ರಾಜ್ಯ ಸರ್ಕಾರದ ೨೦೦೬ ಹಾಗೂ ೨೦೧೨ರ ಸಾಲ ಮನ್ನಾ ಯೋಜನೆಯಲ್ಲಿ ನಡೆದಿರುವ ಅವ್ಯವಹಾರ ಕುರಿತು ಸಹಕಾರ ಸಂಘಗಳ ನಿಯಮ–೬೪ರಡಿ ತನಿಖೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ತನಿಖೆಯು ಯಾವ ಹಂತದಲ್ಲಿದೆ ; ಈವರೆಗಿನ ತನಿಖೆಯಲ್ಲಿ ಕಂಡು ಬಂದಿರುವ ಅವ್ಯವಹಾರದ ವಿವರ ನೀಡುವುದು ;

(ಇ) ಸದರಿ ಸಂಘದ ಆಡಳಿತಾಧಿಕಾರಿಯ ಅವಧಿ ಮುಗಿದಿದ್ದರೂ ಸಹ ಆಡಳಿತಾಧಿಕಾರಿಯ ನೇಮಕವಾಗದೇ ಇರುವುದರಿಂದ, ಮತ್ತು ಹಾಲಿ ಸಂಘದ ಕಾರ್ಯದರ್ಶಿಯವರು ರೈತರಿಗೆ ಹೆಚ್ಚುವರಿ ಸಾಲವನ್ನು ಮಂಜೂರು ಮಾಡಿದ ನಂತರ ಮಂಜೂರಾದ ಹೆಚ್ಚುವರಿ ಸಾಲದ ಹಣವನ್ನು ರೈತರಿಗೆ ನೀಡದೆ ಹಲವು

ದಿನಗಳಿಂದ ಕಛೇರಿಗೆ ಹಾಜರಾಗದೇ ಇರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಈ) ಸಂಘದ ವತಿಯಿಂದ ಎಷ್ಟು ರೈತರಿಗೆ ಹೆಚ್ಚುವರಿ ಸಾಲ ಮಂಜೂರಾಗಿದೆ ; (ರೈತರ ಸಂಪೂರ್ಣ ವಿವರ ನೀಡುವುದು)

(ಉ) ಸಂಘದ ವತಿಯಿಂದ ಕಾಲ್ಪಿವಾರ್ಕ್ಸ್ ಮತ್ತು ಡಿ.ಎನ್.ಪಿ. ಸಾವಯವ ಗೊಬ್ಬರವನ್ನು ಸೂಪರ್ ಫಾಸ್ಪೆಸ್ಟ್ ಗೊಬ್ಬರ ಎಂದು ರೈತರಿಗೆ ಮಾರಾಟ ಮಾಡಿರುವ ಪ್ರಕರಣಗಳಲ್ಲಿ ಕೈಗೊಂಡಿರುವ ಕ್ರಮಗಳು ಹಾಗೂ ಸಂಘದ ಆಪಾದಿತ ಅಧಿಕಾರಿ/ನೌಕರರ ವಿರುದ್ಧ ಹೂಡಲಾಗಿರುವ ಕ್ರಿಮಿನಲ್ ಮೊಕದ್ದಮೆಯು ಯಾವ ಹಂತದಲ್ಲಿದೆ; (ಪ್ರಗತಿ ಕುರಿತು ವಿವರ ನೀಡುವುದು)

(ಊ) ೨೦೧೫–೧೬ನೇ ಸಾಲಿನಲ್ಲಿ ಸುಸ್ತಿದಾರರಿಂದ ಸುಮಾರು ೧೭.೦೦ ಲಕ್ಷಕ್ಕಿಂತ ಹೆಚ್ಚು ಹಣವನ್ನು ವಸೂಲಿ ಮಾಡಿ ಸರ್ಕಾರಕ್ಕೆ ಜಮೆ ಮಾಡಲಾಗಿದ್ದು, ಬರ ಇರುವ ಕಾರಣದಿಂದ ಸುಸ್ತಿದಾರರಿಂದ ವಸೂಲಾದ ಹಣವನ್ನು ರೈತರಿಗೆ ವಾಪಸ್ಸು ನೀಡಲಾಗುವುದೇ? (ವಿವರ ನೀಡುವುದು)

## ಲೋಕಾಯುಕ್ತದಿಂದ ಮುಟ್ಟುಗೋಲಾದ ಆಸ್ತಿ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೪ (೩೧೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಲೋಕಾಯುಕ್ತ ದಾಳಿಯಿಂದ ಸರ್ಕಾರ ಮುಟ್ಟುಗೋಲು ಹಾಕಿಕೊಂಡ ಆಸ್ತಿ ಎಷ್ಟು; (ವಿವರ ನೀಡುವುದು)

(ಆ) ಈ ದಾಳಿಯಿಂದ ವಶಪಡಿಸಿಕೊಂಡ ಆಸ್ತಿ, ಪಾಸ್ತಿ, ನಗದು ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು)

(ಇ) ಈ ದಾಳಿಯಿಂದ ಸಂಗ್ರಹವಾದ ಆಸ್ತಿ, ಪಾಸ್ತಿ, ನಗದನ್ನು ಯಾವ ರೀತಿ ಬಳಕೆ ಅಥವಾ ಜಮಾ ಮಾಡಿ ಇಡಲಾಗಿದೆ;

(ಈ) ಲೋಕಾಯುಕ್ತ ದಾಳಿ ಬಲೆಗೆ ಸಿಲುಕಿದ ಅಧಿಕಾರಿ/ನೌಕರರುಗಳ ಆಸ್ತಿ ಮುಟ್ಟುಗೋಲು ಹಾಕಿಕೊಂಡಿರುವವರ ಹೆಸರು, ವಿಳಾಸದೊಂದಿಗೆ ಮಾಹಿತಿ ನೀಡುವುದು?

## ಅತಿಕ್ರಮಣವನ್ನು ತೆರವುಗೊಳಿಸುವ ಕುರಿತು

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೦೫ (೨೨೫) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಜಯಪುರ ನಗರದ ಹೃದಯ ಭಾಗದಲ್ಲಿರುವ ಕಿತ್ತೂರು ಚೆನ್ನಮ್ಮ ನಾಟಕ ಮಂದಿರದ ಜಾಗವು ಖಾಸಗಿಯವರಿಂದ ಅತಿಕ್ರಮಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಆ) ಖಾಸಗಿಯವರಿಂದ ಆಗುತ್ತಿರುವ ಅತಿಕ್ರಮಣವನ್ನು ತೆರವುಗೊಳಿಸಲು ಸರ್ಕಾರ ಈ ಆಸ್ತಿಯನ್ನು ಅಳತೆ ಮಾಡಿ ಸರಹದ್ದು ಗುರುತಿಸುವ ಉದ್ದೇಶವನ್ನು ಹೊಂದಿದೆಯೇ; ಹೊಂದಿದ್ದರೆ, ಇದನ್ನು ಯಾವಾಗ ಗುರುತಿಸಲಾಗುವುದು; (ಮಾಹಿತಿ ನೀಡುವುದು)

(ಇ) ಹಳೆಯದಾದ ಬೆಲೆ ಬಾಳುವ ನಾಟಕ ಮಂದಿರವನ್ನು ಪುನಶ್ಚೇತನಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಇದ್ದರೆ, ಇದನ್ನು ಯಾವಾಗ ಪುನಶ್ಚೇತನಗೊಳಿಸಲಾಗುವುದು? (ವಿವರವಾದ ಮಾಹಿತಿ ನೀಡುವುದು)

## ರಾಜ್ಯದಲ್ಲಿ ಹೊಸ ಪೊಲೀಸ್ ಠಾಣೆಗಳ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೬ (೨೨೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಎಷ್ಟು ಪೊಲೀಸ್ ಠಾಣೆಗಳನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಕಳೆದ ೧೦ ವರ್ಷಗಳಲ್ಲಿ ವಿಜಯಪುರ ಜಿಲ್ಲೆಯಲ್ಲಿ ಅತ್ಯಾಚಾರ, ಅತ್ಯಾಚಾರ ಪ್ರಯತ್ನಗಳು, ಕೊಲೆ ಯತ್ನ, ದರೋಡೆ, ಕಳ್ಳತನ, ಮೋಸ, ವಂಚನೆ ಪ್ರಕರಣಗಳು ದಾಖಲಾಗಿದೆಯೇ; (ವಿವರವಾದ ಮಾಹಿತಿ ನೀಡುವುದು)

(ಇ) ವಿಜಯಪುರದಲ್ಲಿ ಹೆಚ್ಚುತ್ತಿರುವ ಮಹಿಳಾ ಪ್ರಕರಣಗಳಿಗೆ ವಿಶೇಷ ಪೊಲೀಸ್ ಠಾಣೆ ಸ್ಥಾಪಿಸಲು ಮತ್ತು ಪ್ರಮುಖ ಬಡಾವಣೆಗಳ ಮುಖ್ಯ ರಸ್ತೆಗಳಲ್ಲಿ ಸಿ.ಸಿ. ಕ್ಯಾಮರ ಅಳವಡಿಸಲು ಸರ್ಕಾರ ಉದ್ದೇಶಿಸಿದೆಯೇ; ಉದ್ದೇಶಿಸಿದ್ದರೆ, ಇದನ್ನು ಯಾವಾಗಿನಿಂದ ಜಾರಿಗೆ ತರಲಾಗುವುದು? (ವಿವರವಾದ ಮಾಹಿತಿ ನೀಡುವುದು)

## ಮಾನ್ವಿ ಪಟ್ಟಣದಲ್ಲಿ ಕುಡಿಯುವ ನೀರಿಗಾಗಿ ಕೆರೆ ನಿರ್ಮಾಣದ ಬಗ್ಗೆ

**ಶ್ರೀ ಎನ್.ಎಸ್. ಭೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೭ (೨೭೩) ಮಾನ್ಯ ನಗರಾಭಿವೃದ್ಧಿ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಾನ್ವಿ ಪಟ್ಟಣದಲ್ಲಿ ಕುಡಿಯುವ ನೀರಿಗಾಗಿ ಕರ್ನಾಟಕ ನಗರ ನೀರು ಸರಬರಾಜು ವತಿಯಿಂದ ಕೆರೆ ನಿರ್ಮಾಣ (ಇನ್‌ಫೌಂಡಿಂಗ್ ರಿಸರ್ವಾಯರ್) ಮಾಡಲು ಯಾವ ವರ್ಷದಲ್ಲಿ ಮಂಜೂರಾತಿಗೆ ಅನುಮೋದನೆ ಪಡೆಯಲಾಗಿದೆ;

(ಆ) ಇಲ್ಲಿಯವರೆಗೂ ಖರ್ಚು ಮಾಡಿರುವ ಮೊತ್ತ ಎಷ್ಟು; ಇದನ್ನು ಪೂರೈಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ರಾಯಚೂರು ಜಿಲ್ಲೆಯ ಪೊಲೀಸ್ ಸಿಬ್ಬಂದಿಗಳಿಗೆ, ವಸತಿ, ವಾಹನಗಳ ಕೊರತೆ ಬಗ್ಗೆ

**ಶ್ರೀ ಎನ್.ಎಸ್. ಭೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೨೦೮ (೨೭೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ನಗರದಲ್ಲಿರುವ ಜಿಲ್ಲಾ ಕೇಂದ್ರ ಕಾರಗೃಹವನ್ನು ನಗರದ ಹೊರಭಾಗಕ್ಕೆ ಸ್ಥಳಾಂತರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಆ) ರಾಯಚೂರು ಜಿಲ್ಲೆಯಲ್ಲಿ ಪೊಲೀಸ್ ಸಿಬ್ಬಂದಿಗಳಿಗೆ ವಸತಿ ಗೃಹಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕೊರತೆ ಸರಿಪಡಿಸಲು ಸರಕಾರ ತೆಗೆದುಕೊಂಡ ಕ್ರಮಗಳೇನು;

(ಇ) ರಾಯಚೂರು ಜಿಲ್ಲೆಯಲ್ಲಿ ಪೊಲೀಸ್ ಇಲಾಖೆಗೆ ವಾಹನಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಈ) ರಾಯಚೂರು ಜಿಲ್ಲೆಯ ನೂತನವಾಗಿ ಪೊಲೀಸ್ ಠಾಣೆ ಹಾಗೂ ಸಂಚಾರಿ ಪೊಲೀಸ್ ಠಾಣೆಗಳನ್ನು ಮಂಜೂರು ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಉ) ೨೦೧೬-೧೭ರಲ್ಲಿ ಹೈದರಾಬಾದ್ ಕರ್ನಾಟಕ ವಿಶೇಷ ಸ್ಥಾನಮಾನದ ಮುಖಾಂತರ ಭರ್ತಿ ಮಾಡಿರುವ, ಖಾಲಿ ಇರುವ ಹುದ್ದೆಗಳೆಷ್ಟು; ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು)

## ರಾಜ್ಯ ಮತ್ತು ಜಿಲ್ಲಾ ಮಟ್ಟದ ಪ್ರಾದೇಶಿಕ ಪತ್ರಿಕೆಗಳ ಬಗ್ಗೆ

**ಶ್ರೀ ಎನ್.ಎಸ್. ಭೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):-**

೨೯ (೨೭೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸರ್ಕಾರಿ ಜಾಹಿರಾತು ನೀಡುವ ಸಂದರ್ಭದಲ್ಲಿ ರಾಜ್ಯ ಮತ್ತು ಪ್ರಾದೇಶಿಕ ಪತ್ರಿಕೆಗಳಿಗಿರುವ ವ್ಯತ್ಯಾಸವನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು;

(ಆ) "ಆರೋಗ್ಯ ಭಾಗ್ಯ" ಯೋಜನೆಯಲ್ಲಿ ಪತ್ರಿಕೋದ್ಯಮದ ಸಿಬ್ಬಂದಿ ವರ್ಗಕ್ಕೆ ಅವಕಾಶ ಕಲ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಇ) ಜಿಲ್ಲಾ ಮಟ್ಟದ ಪತ್ರಿಕಾ ವರದಿಗಾರರಿಗೆ 'ಬಸ್ ಪಾಸ್' ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಈ) ವಾರ್ತಾ ಇಲಾಖೆಗೆ ಸೇರಿರುವ ಜಿಲ್ಲಾ ಮಟ್ಟದ ಪತ್ರಿಕೆಗಳನ್ನು ಪ್ರೋತ್ಸಾಹಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ

**ಶ್ರೀ ಎನ್.ಎಸ್. ಭೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೨೧೦ (೨೭೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ ಒಟ್ಟು ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಎಷ್ಟು;

(ಆ) ೨೦೧೬–೧೭ರಲ್ಲಿ ವಿವಿಧ ಇಲಾಖೆಗಳಲ್ಲಿ ಭರ್ತಿ ಮಾಡಿರುವ ಹುದ್ದೆಗಳೆಷ್ಟು; ಬಾಕಿ ಉಳಿದಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಇ) ವಿವಿಧ ಇಲಾಖೆಗಳಿಗೆ ಸೇರಿರುವ ಸರ್ಕಾರಿ ಖಾಲಿ ಜಾಗವನ್ನು ಸರ್ಕಾರಿ ಕಟ್ಟಡಗಳ ಉಪಯೋಗಕ್ಕಾಗಿ ಅನುಮತಿ ನೀಡಲು ನಿಯಮಗಳು (ಪ್ರೊಸಿಜರ್ ಡಿಲೇ) ಮಂದಗತಿಯಲ್ಲಿ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ಐ.ಎ.ಎಸ್. ಹುದ್ದೆಯ ಬಡ್ತಿಗೆ ಇರುವ ಮಾನದಂಡಗಳ ಬಗ್ಗೆ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೨೧೧ (೩೧೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ NON. S.C.S ವೃಂದದಿಂದ I.A.S. ಬಡ್ತಿಗೆ ಇರುವ ಮಾನದಂಡಗಳೇನು; (ವಿವರವಾದ ಮಾಹಿತಿ ಕೊಡುವುದು)

(ಆ) ಈ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಎಷ್ಟು ಅಧಿಕಾರಿಗಳಿಗೆ ಈ ರೀತಿ ಬಡ್ತಿ ನೀಡಲಾಗಿದೆ; (ವಿವರವಾದ ಮಾಹಿತಿ ಕೊಡುವುದು)

(ಇ) ದಿನಾಂಕ: ೦೧-೦೧-೨೦೧೭ರ ವರೆಗೆ ಈ ಯೋಜನೆಯಡಿ ಖಾಲಿ ಇರುವ ಹುದ್ದೆಗಳೆಷ್ಟು; ಸರ್ಕಾರ ಈ ಹುದ್ದೆಗಳನ್ನು ತುಂಬಲು ಕೈಗೊಂಡಿರುವ ಕ್ರಮವೇನು?

## ಕೊಳಚೆ ನೀರು ಸಂಸ್ಕರಣಾ ಘಟಕ (S.T.P) ನಿರ್ಮಿಸುವ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :-**

೨೧೨ (೩೧೭) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ (BWSSB) ೨೦ ಅಥವಾ ಹೆಚ್ಚಿನ ಅಪಾರ್ಟಮೆಂಟ್‌ಗಳ (ಗುಂಪು ಮನೆ)ನ್ನು ಹೊಂದಿದವರಿಗೆ ಕೊಳಚೆ ನೀರು ಸಂಸ್ಕರಣಾ ಘಟಕ (S.T.P) ನಿರ್ಮಿಸಬೇಕೆಂದು ಆದೇಶ ಮಾಡಿರುವುದು ನಿಜವೆ;

(ಆ) ಸದರಿ ಅಪಾರ್ಟ್‌ಮೆಂಟ್‌ಗಳಿಗೆ ಕೊಳಚೆ ನೀರು ಸಂಸ್ಕರಣಾ ಘಟಕ ಕಡ್ಡಾಯವೆ; ಅಥವಾ ಐಚ್ಛಿಕವೆ; (ವಿವರವಾದ ಮಾಹಿತಿ ನೀಡುವುದು)

(ಇ) ಒಂದು ಸಲ ಪರವಾನಿಗೆ ನಿಯಮಗಳಂತೆ ಕಟ್ಟಡವನ್ನು ನಿರ್ಮಿಸಿದ ಮೇಲೆ ಅನಗತ್ಯವಾಗಿ ಜಾರಿಗೆ ತರಲಾಗದ ಆದೇಶ ನೀಡಿ ಈ ಮನೆಗಳ ನಿವಾಸಿಗಳಿಗೆ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಇಂತಹ ಅವೈಜ್ಞಾನಿಕ ಆದೇಶದಿಂದಾದಂತಹ ರೂಪದಲ್ಲಿ ವಸೂಲಾದ ಹಣವನ್ನು ವಾಪಸ್ಸು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೆ ?

## ಸಚಿವಾಲಯದಲ್ಲಿ ಕಡತ ವಿಲೇವಾರಿಯಲ್ಲಿನ ವಿಳಂಬದ ಬಗ್ಗೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೩ (೨೯೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಚಿವಾಲಯದ ಇಲಾಖೆಗಳಲ್ಲಿ ಕಡತಗಳ ವಿಲೇವಾರಿಯಲ್ಲಿ ವಿಳಂಬವಾಗುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಕಡತ ವಿಲೇವಾರಿಗೆ ಇಂತಿಷ್ಟು ಅವಧಿ ಎಂದು ಕಾಲ ನಿಗಧಿಪಡಿಸಲಾಗಿದೆಯೇ; ವಿಷಯ ನಿರ್ವಾಹಕರಿಂದ ಕಾರ್ಯದರ್ಶಿಗಳ ಮಟ್ಟದವರೆಗೆ ಎಷ್ಟೆಷ್ಟು ಅವಧಿಯಲ್ಲಿ ಕಡತ ವಿಲೇವಾರಿ ಮಾಡಬೇಕು ಎಂಬ ಬಗ್ಗೆ ನಿಯಮಾವಳಿ ರಚಿಸಲಾಗಿದೆಯೇ; (ವಿವರ ನೀಡುವುದು)

(ಇ) ಆಯಾ ಇಲಾಖೆಗಳಲ್ಲಿನ ಕಡತ ವಿಲೇವಾರಿ ಸಮರ್ಪಕವಾಗಿ ಆಗುತ್ತಿದೆಯೇ ಇಲ್ಲವೇ ಎಂಬ ಬಗ್ಗೆ ಪರಿಶೀಲಿಸಲು ಯಾವ ವ್ಯವಸ್ಥೆ ಇದೆ; ತನಿಖೆ ಮಾಡಿ ಆಡಳಿತದಲ್ಲಿ ಸುಧಾರಣೆ ತರಲು ನಿಯೋಜಿಸಲಾಗಿರುವ ಅಧಿಕಾರಿಗಳು ಯಾರು; ಅವರು ಯಾವ ರೀತಿ ಕ್ರಮ ಕೈಗೊಂಡಿದ್ದಾರೆ;

(ಈ) ಕಡತಗಳ ಶೀಘ್ರ ವಿಲೇವಾರಿಗೆ ಮತ್ತು ಆಡಳಿತದಲ್ಲಿ ಚುರುಕು ತಂದು ಆಡಳಿತ ಸುಧಾರಣೆಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ?

## ಫುಟ್‌ಪಾತ್ ಮತ್ತು ರಸ್ತೆಗಳಲ್ಲಿ ವ್ಯಾಪಾರಿಗಳಿಂದ ತೊಂದರೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೪ (೨೯೧) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರದ ಅನೇಕ ಕಡೆಗಳಲ್ಲಿ ಪಾದಚಾರಿ ಮಾರ್ಗಗಳಲ್ಲಿ ಮಾತ್ರವಲ್ಲದೆ ರಸ್ತೆಗಳಲ್ಲೂ ಮಾರಾಟ ಮಾಡುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿರುವ ಈ ಪದ್ಧತಿಯನ್ನು ಸಂಪೂರ್ಣವಾಗಿ ನಿಲ್ಲಿಸಲು ಸಾಧ್ಯವಿಲ್ಲದಿರುವುದರಿಂದ ಪಾದಚಾರಿ ಮಾರ್ಗದ ೧/೩ ಭಾಗವನ್ನು ವ್ಯಾಪಾರಗಾರರಿಗೆ ನಿಗಧಿಪಡಿಸಿ ಪಾದಚಾರಿಗಳಿಗೆ ಅನುಕೂಲ ಮಾಡಿಕೊಡಲು ಕ್ರಮ ಕೈಗೊಳ್ಳಲಾಗುವುದೇ;

(ಇ) ರಸ್ತೆಗಳಲ್ಲಿ ಮಾರಾಟ ಮಾಡುವುದರಿಂದ ವಾಹನ ಚಾಲನೆಗೆ ಅನಾನುಕೂಲವಾಗಿ ಅಪಘಾತಗಳಿಗೆ ಅವಕಾಶವಾಗುವುದರಿಂದ ರಸ್ತೆಗಳಲ್ಲಿ ಮಾರಾಟ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

(ಈ) ಮಹಾನಗರ ಪಾಲಿಕೆ ಮತ್ತು ಪೋಲೀಸ್ ಇಲಾಖೆ ಜಂಟಿಯಾಗಿ ಚಿಂತಿಸಿ ಫುಟ್‌ಪಾತ್ ಮತ್ತು ರಸ್ತೆಗಳಲ್ಲಿನ ವ್ಯಾಪಾರ ನಿಯಂತ್ರಣಕ್ಕೆ ಕಾರ್ಯಕ್ರಮ ರೂಪಿಸಲಾಗುತ್ತದೆಯೇ?

## ಬೆಂಗಳೂರಿನಲ್ಲಿರುವ ಸುರಂಗ ಮಾರ್ಗಗಳ ಸದುಪಯೋಗಪಡಿಸಿಕೊಳ್ಳುವ ಬಗ್ಗೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೫ (೨೯೩) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರದ ಅನೇಕ ಪ್ರಮುಖ ಸ್ಥಳಗಳಲ್ಲಿ ಪಾದಚಾರಿಗಳಿಗೆ ರಸ್ತೆ ದಾಟಲು ಸುರಂಗ ಮಾರ್ಗಗಳನ್ನು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಮಹಾನಗರ ಪಾಲಿಕೆಯವರು ನಿರ್ಮಿಸಿದ್ದರೂ, ಅದು ಬಳಕೆಯಾಗದೆ ನಿರುಪಯುಕ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸುರಂಗ ಮಾರ್ಗಗಳು ಪಾದಚಾರಿಗಳಿಗೆ ಬಳಕೆಯಾಗದಿರುವುದರಿಂದ ಅಲ್ಲಿ ಅನೈತಿಕ ಮತ್ತು ಅಕ್ರಮ ಚಟುವಟಿಕೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಸುರಂಗ ಮಾರ್ಗಗಳನ್ನು ಸ್ವಚ್ಛಗೊಳಿಸಿ ಕಾವಲುಗಾರರನ್ನು ನೇಮಿಸಿ ಪಾದಚಾರಿಗಳಿಗೆ ಅನುಕೂಲ ಮಾಡಿಕೊಟ್ಟು ಅದರ ಸದುಪಯೋಗಪಡಿಸಲು ಮಹಾನಗರ ಪಾಲಿಕೆ ಕ್ರಮ ಕೈಗೊಳ್ಳುವುದೇ?

## ಕೃಷಿ ಪತ್ತಿನ ಸಹಕಾರ ಸಂಘಗಳು

**ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೬ (೨೭೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚನ್ನರಾಯಪಟ್ಟಣ ತಾಲ್ಲೂಕು, ನುಗ್ಗೇಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ೨೦೧೪ ರಿಂದ ೨೦೧೭ರವರೆಗೆ ಸಾಲ ಪಡೆದಿರುವ ಸದಸ್ಯರೆಷ್ಟು; (ವಿವರವನ್ನು ಒದಗಿಸುವುದು)

(ಆ) ಚನ್ನರಾಯಪಟ್ಟಣ ತಾಲ್ಲೂಕು ನುಗ್ಗೇಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದಿಂದ ೨೦೧೪–೧೫, ೨೦೧೫–೧೬ ಮತ್ತು ೨೦೧೬–೧೭ನೇ ಸಾಲಿನಲ್ಲಿ ಸದಸ್ಯತ್ವ ಪಡೆದವರ ಪೈಕಿ ಸಾಲ ಪಡೆದ ಮತ್ತು ಸಾಲ ಪಡೆಯದೆ ಇರುವ ಸದಸ್ಯರುಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಇ) ಚನ್ನರಾಯಪಟ್ಟಣ ತಾಲ್ಲೂಕು ಕಬ್ಬಳ್ಳಿಯ ಕೃಷಿ ಪತ್ತಿನ ಸಹಕಾರ ಸಂಘದಿಂದ ೨೦೧೪–೧೭ರ ಸಾಲಿನಲ್ಲಿ ಸಂಘವು ಸದಸ್ಯರುಗಳಿಗೆ ಸಾಲವನ್ನು ನೀಡಿದೆಯೇ? (ಮಾಹಿತಿ ಒದಗಿಸುವುದು)

## ಸಕಾಲ ಸೇವೆ ವಿಸ್ತರಣೆ ಮತ್ತು ಕಾಗದ ರಹಿತ ಕಛೇರಿ ಅಳವಡಿಕೆ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೭ (೨೨೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಕಾಲ ವ್ಯಾಪ್ತಿಗೆ ಒಟ್ಟು ಎಷ್ಟು ಇಲಾಖೆಗಳ ಯಾವ ಯಾವ ಸೇವೆಗಳನ್ನು ತರಲಾಗಿದೆ;

(ಆ) ಸಕಾಲ ಜಾರಿಗೆ ಬಂದು ೪–೫ ವರ್ಷ ಕಳೆದಿದ್ದರೂ, ಇದುವರೆಗೂ ಪ್ರತಿಯೊಂದು ಇಲಾಖೆಯ ಪ್ರತಿಯೊಂದು ಸೇವೆಗಳನ್ನು ಸಕಾಲ ವ್ಯಾಪ್ತಿಗೆ ಒಳಪಡಿಸದಿರಲು ಇರುವ ತೊಡಕುಗಳೇನು;

(ಇ) ರಾಜ್ಯ ಸರ್ಕಾರ ಪ್ರತಿಯೊಂದು ಸೇವೆಗಳನ್ನು "ಸಕಾಲ" ಯೋಜನೆಯಡಿ ತರುವ ಕುರಿತು ಸರ್ಕಾರದ ನಿಲುವೇನು; ಹಾಗೂ ಯಾವ ಕಾಲಮಿತಿಯಲ್ಲಿ ಯೋಜನೆ ಅನುಷ್ಠಾನ ಮಾಡಲಾಗುವುದು;

(ಈ) ಒಟ್ಟು ಎಷ್ಟು ಇಲಾಖೆಗಳ ಎಷ್ಟು ಕಛೇರಿಗಳನ್ನು ಕಾಗದ ರಹಿತ ಕಛೇರಿಗಳನ್ನಾಗಿ ಘೋಷಿಸಲಾಗಿದೆ; ಕಾಗದ ರಹಿತ ಕಛೇರಿಗಳ ವಿಸ್ತರಣೆಗೆ ಇರುವ ತೊಡಕುಗಳೇನು; ಕಾಗದ ರಹಿತ ಕಛೇರಿ ನಿರ್ಮಾಣಕ್ಕೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ;

(ಉ) ಪ್ರತಿಯೊಂದು ಇಲಾಖೆ ಕಛೇರಿ ಸೇವೆಗಳನ್ನು ಸಕಾಲ ವ್ಯಾಪ್ತಿಗೆ ತರಲು ಕಾಗದ ರಹಿತ ಕಛೇರಿ, ಇ–ಆಫೀಸ್ ತಂತ್ರಾಂಶಗಳ ಬಳಕೆಯಿಂದ (ಕಡತ ಚಲನೆಗಾಗಿ) ಆಡಳಿತವನ್ನು ಚುರುಕುಗೊಳಿಸುವುದು ಸೇರಿದಂತೆ ಭ್ರಷ್ಟಾಚಾರ ನಿಯಂತ್ರಣ ಮಾಡಲು ಸರ್ಕಾರ ಕ್ರಮ ವಹಿಸುವುದೆ; ಈ ಬಗ್ಗೆ ಸರ್ಕಾರದ ಯೋಚನೆ ಮತ್ತು ಯೋಜನೆಗಳೇನು?

## ಪಾರ್ಕಿಂಗ್ ಕಾಂಪ್ಲೆಕ್ಸ್ ಬಗ್ಗೆ

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೮ (೨೪೦) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಮಹಾನಗರಗಳಲ್ಲಿ ಸಾರ್ವಜನಿಕರ ವಾಹನಗಳಿಗೆ ಪಾರ್ಕಿಂಗ್ ಕಾಂಪ್ಲೆಕ್ಸ್‌ಗಳನ್ನು ನಿರ್ಮಿಸುವ ಉದ್ದೇಶವಿದೆಯೇ;

(ಆ) ಇದ್ದಲ್ಲಿ, ಯಾವ ಯಾವ ನಗರಗಳಲ್ಲಿ ಪಾರ್ಕಿಂಗ್ ಕಾಂಪ್ಲೆಕ್ಸ್‌ಗಳನ್ನು ನಿರ್ಮಿಸಲು ಸ್ಥಳ ಗುರುತಿಸಲಾಗಿದೆ?

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಗತ್ಯವಿರುವ ನೀರಿನ ಲಭ್ಯತೆ ಪೂರೈಸಲು ಕೈಗೊಂಡ ಕ್ರಮದ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೯೯ (೨೪೪) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾರ್ಷಿಕ ಮಳೆಯಿಂದಾಗಿ ಸುಮಾರು ೩೬ ಟಿ.ಎಂ.ಸಿ. ಯಷ್ಟು ನೀರು ಲಭ್ಯವಾಗುತ್ತದೆ ಎಂದು ಈ ಹಿಂದೆ ಸದನದಲ್ಲಿ ತಿಳಿಸಿದ್ದು, ನೀರಿನ ಕೊರತೆ ಅನುಭವಿಸುತ್ತಿರುವ ಬೆಂಗಳೂರು ಮಹಾನಗರ ಪಾಲಿಕೆ ಈ ನೀರಿನ ಸದ್ಬಳಕೆಗಾಗಿ ಕೈಗೊಂಡಿರುವ ಹಾಗೂ ಕೈಗೊಳ್ಳಬೇಕಾಗಿರುವ ದೂರಗಾಮಿ ಪರಿಣಾಮ ಬೀರಬಲ್ಲ ಯೋಜನೆಗಳು ಯಾವುವು; (ವಿವರ ನೀಡುವುದು)

(ಆ) ಮಳೆಯಿಂದಾಗಿ ವಾರ್ಷಿಕ ಲಭ್ಯವಿರುವ ೩೬ ಟಿ.ಎಂ.ಸಿ ನೀರಿನಲ್ಲಿ ಈಗ ಎಷ್ಟು ಪ್ರಮಾಣದ ನೀರು ಸದ್ಬಳಕೆ ಆಗುತ್ತಿದೆ; (ವಿವರ ನೀಡುವುದು)

(ಇ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾರ್ಷಿಕ ಅಗತ್ಯವಿರುವ ನೀರಿನ ಪ್ರಮಾಣವೆಷ್ಟು; ಈ ಪ್ರಮಾಣದ ನೀರಿನ ಲಭ್ಯತೆ ಪೂರೈಸುವಲ್ಲಿ ಸರಕಾರ ಏನು ಕ್ರಮ ಕೈಗೊಂಡಿದೆ?

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಸ್ಥಳಗಳಲ್ಲಿ ಹಸಿರು ಬೆಳೆಸುವುದಕ್ಕಾಗಿ ಕೈಗೊಂಡಿರುವ ಕಾರ್ಯಕ್ರಮದ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೨೦ (೨೪೨) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಈಗ ಇರುವ ಹಸಿರನ್ನು ಉಳಿಸುವುದಕ್ಕಾಗಿ ಏನು ಕಾರ್ಯಕ್ರಮ ಕೈಗೊಳ್ಳಲಾಗಿದೆ ಹಾಗೂ ಬೆಂಗಳೂರಿನ ಹೊರ ವಲಯದಲ್ಲಿ ಲಭ್ಯವಿರುವ ಸರಕಾರಿ ಸ್ಥಳಗಳಲ್ಲಿ ಹಸಿರು ಬೆಳೆಸುವುದಕ್ಕಾಗಿ ಕೈಗೊಂಡಿರುವ ಕಾರ್ಯಕ್ರಮಗಳು ಯಾವುವು; (ವಿವರ ನೀಡುವುದು)

(ಆ) ಶುದ್ಧ ಗಾಳಿ ಹಾಗೂ ಹಸಿರಿನ ನಡುವೆ ನೇರ ಸಂಬಂಧವಿರುವುದರಿಂದ, ಒಂದು ಕೋಟಿಗಿಂತ ಹೆಚ್ಚು ಜನಸಂಖ್ಯೆ ಇರುವ ಬೆಂಗಳೂರಿನ ನಾಗರೀಕರಿಗೆ ಅನುಕೂಲ ಆಗುವಂತೆ ಹಸಿರು ಬೆಂಗಳೂರಿಗಾಗಿ (Green Bengaluru) ಯಾವ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ;

(ಇ) ಇದರಲ್ಲಿ ಅರಣ್ಯ ಇಲಾಖೆಯ ಪಾತ್ರವೇನು?

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸುರಂಗ ಪಾದಚಾರಿ ಮಾರ್ಗಗಳ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೨೧ (೨೪೩) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಎಷ್ಟು ಸುರಂಗ ಪಾದಚಾರಿ ಮಾರ್ಗಗಳನ್ನು ನಿರ್ಮಿಸಲಾಗಿದೆ; (ವಿವರ ನೀಡುವುದು)

(ಆ) ಈ ಸುರಂಗ ಪಾದಚಾರಿ ಮಾರ್ಗಗಳನ್ನು ಪಾದಚಾರಿಗಳು ಬಳಸುತ್ತಿರುವರೇ; (ವಿವರ ನೀಡುವುದು)

(ಇ) ಅನೇಕ ಸುರಂಗ ಪಾದಚಾರಿ ಮಾರ್ಗಗಳನ್ನು ಬೀಗ ಜಡಿದು ಮುಚ್ಚಿರುವುದು ಸರಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು; (ವಿವರ ನೀಡುವುದು)

(ಈ) ಜನರಿಗೆ ಉಪಯೋಗವಿಲ್ಲದಿರುವ ಈ ರೀತಿಯ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಸರಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟ ಆಗಿರುವುದರ ಕುರಿತು ಯಾರ ಮೇಲೆ ಜವಾಬ್ದಾರಿ ಹೊರಿಸಲಾಗಿದೆ;

(ಉ) ಈ ಸುರಂಗ ಪಾದಚಾರಿ ಮಾರ್ಗಗಳನ್ನು ಭವಿಷ್ಯದಲ್ಲಿ ಉಪಯೋಗಿಸುವ ಕುರಿತು ಯಾವ ನಿರ್ಣಯ ಕೈಗೊಳ್ಳಲಾಗಿದೆ?

## ಪೊಲೀಸ್ ಇಲಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕರ ಮುಂಬಡ್ತಿ ಕುರಿತು

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೨೨೨ (೨೪೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪೊಲೀಸ್ ಇಲಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿ ೫ ರಿಂದ ೧೦ ವರ್ಷಗಳ ಸೇವಾವಧಿ ಪೂರ್ಣಗೊಳ್ಳುವ ಮೊದಲೇ ಪ್ರಥಮ ದರ್ಜೆ ಸಹಾಯಕರಾಗಿ ಬಡ್ತಿ ಹೊಂದಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಆ) ಪೊಲೀಸ್ ಇಲಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿ ೧೫ ರಿಂದ ೨೦ ವರ್ಷಗಳ ಸೇವಾವಧಿ ಪೂರ್ಣಗೊಂಡು ಮುಂಬಡ್ತಿಗೆ ಎಲ್ಲಾ ಅರ್ಹತೆಗಳಿದ್ದರೂ ಇದುವರೆಗೂ ಪ್ರಥಮ ದರ್ಜೆ ಸಹಾಯಕರಾಗಿ ಬಡ್ತಿ ಹೊಂದದಿರುವ ದ್ವಿತೀಯ ದರ್ಜೆ ಸಹಾಯಕರ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಇ) ಪೊಲೀಸ್ ಇಲಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿ ೫ ರಿಂದ ೧೦ ವರ್ಷಗಳ ಸೇವಾವಧಿ ಪೂರ್ಣಗೊಳ್ಳುವ ಮೊದಲೇ ಕೆಲವು ಘಟಕಗಳಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಬಡ್ತಿ ದೊರಕುತ್ತಿದ್ದು, ರಾಜ್ಯದ ರಾಜಧಾನಿಯಿಂದ ದೂರದಲ್ಲಿರುವ ಪೊಲೀಸ್ ಇಲಾಖೆಯ ಘಟಕಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದ್ವಿತೀಯ ದರ್ಜೆ ಸಹಾಯಕರು ೧೫ ರಿಂದ ೨೫ ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿದರೂ, ಇದುವರೆಗೂ ಪ್ರಥಮ ದರ್ಜೆ ಸಹಾಯಕರಾಗಿ ಬಡ್ತಿ ದೊರೆಯದೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಅನ್ಯಾಯವನ್ನು ನಿವಾರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

## ಬೆಳಗಾವಿ ಜಿಲ್ಲೆಯಲ್ಲಿ ಅಮಾಯಕ ಬಡ ಯುವತಿಯರನ್ನು ಅಕ್ರಮವಾಗಿ ಮಾರಾಟ ಮಾಡುತ್ತಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೨೩ (೨೯೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಗಡಿ ಜಿಲ್ಲೆ ಬೆಳಗಾವಿಯಲ್ಲಿ ಅಮಾಯಕ ಮಹಿಳೆಯರನ್ನು ಮತ್ತು ಬಡ ಯುವತಿಯರನ್ನು ಅಪಹರಿಸಿ ಹೊರ ರಾಜ್ಯಗಳಿಗೆ

ಅಕ್ರಮವಾಗಿ ಮಾರಾಟ ಮಾಡುವ ದಂಧೆಯು ಅವ್ಯಾಹತವಾಗಿ ನಡೆಯುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈಗಾಗಲೇ ಇಂತಹ ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ;

(ಇ) ಈ ಪ್ರಕರಣಗಳಲ್ಲಿ ಎಷ್ಟು ಜನ ಅಪರಾಧಿಗಳನ್ನು ಬಂಧಿಸಲಾಗಿದೆ;

(ಈ) ಇಂತಹ ಪ್ರಕರಣಗಳಲ್ಲಿ ಬಾಗಿಯಾಗಿರುವವರು ಹೊರ ರಾಜ್ಯಗಳ ಜೊತೆ ಸಂಪರ್ಕದಲ್ಲಿದ್ದು, ಇದಕ್ಕೆ ಕಡಿವಾಣ ಹಾಕಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು)

## ಬೆಂಗಳೂರು ಮಹಾನಗರದಲ್ಲಿ ಬೀದಿ ನಾಯಿಗಳ ಉಪಟಳ ಹೆಚ್ಚಾಗಿರುವ ಕುರಿತು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೨೪ (೨೯೫) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಮಹಾನಗರದಲ್ಲಿ ಹಾಗೂ ಇತರ ಮಹಾನಗರಗಳಲ್ಲಿ ಬೀದಿನಾಯಿಗಳ ಹಾವಳಿಗಳು ಹೆಚ್ಚಾಗಿ ಮಕ್ಕಳು ಹಾಗೂ ವಯಸ್ಕರನ್ನು ಕಚ್ಚಿ ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಬೀದಿ ನಾಯಿಗಳ ದಾಳಿಯಿಂದ ಮೃತರಾದ ಮಕ್ಕಳ ಸಂಖ್ಯೆ ಎಷ್ಟು ; ಸರ್ಕಾರದ ನಿರ್ಲಕ್ಷ್ಯದಿಂದ ಮೃತರಾದ ಮಕ್ಕಳ ಕುಟುಂಬದವರಿಗೆ ಯಾವ ರೀತಿಯ ಪರಿಹಾರ ನೀಡಲಾಗಿದೆ ;

(ಇ) ಬೀದಿ ನಾಯಿಗಳ ಹಾವಳಿ ತಪ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಈ) ಬೀದಿ ನಾಯಿಗಳ ಉಪಟಳ ತಪ್ಪಿಸಲು ಅವುಗಳಿಗಾಗಿ ಪುನರ್‌ವಸತಿ ಕೇಂದ್ರವನ್ನು ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದಿದೆಯೇ? (ವಿವರ ನೀಡುವುದು)

## ಪಿ.ಎಲ್.ಡಿ. ಬ್ಯಾಂಕ್‌ಗಳಿಂದ/ನೇಕಾರ ಸಹಕಾರಿ ಸಂಘಗಳ ಮೂಲಕ ನೇಕಾರರಿಗೆ ಸಾಲ ನೀಡುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೨೨೫ (೨೮೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಪಿ.ಎಲ್.ಡಿ. ಬ್ಯಾಂಕ್‌ಗಳ ಮೂಲಕ ರೈತಾಪಿ ವರ್ಗದವರಿಗೆ ಕಳೆದ ೩ ವರ್ಷಗಳಲ್ಲಿ ನೀಡಿರುವ ವರ್ಷವಾರು ಸಾಲದ ಮೊತ್ತ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಸದರಿ ಸಾಲ ಸೌಲಭ್ಯವನ್ನು ನೇಕಾರ ಸಹಕಾರಿ ಸಂಘಗಳಿಗೂ ಅನ್ವಯಿಸಲಾಗಿದೆಯೇ ; ಇಲ್ಲವಾದಲ್ಲಿ, ಆ ಕುರಿತಾದ ಸರ್ಕಾರದ ನಿಲುವುಗಳೇನು ;

(ಇ) ಪಿ.ಎಲ್.ಡಿ. ಬ್ಯಾಂಕ್ ಸಾಲ ಸೌಲಭ್ಯಗಳನ್ನು ನೇಕಾರ ಸಹಕಾರಿ ಸಂಘಗಳಿಗೂ ಒದಗಿಸಿಕೊಟ್ಟು ನಶಿಸುತ್ತಿರುವ ಜವಳಿ ಉದ್ಯಮವನ್ನು ಉಳಿಸಿಕೊಳ್ಳಲು ಸರ್ಕಾರದ ಸಕಾಲಿಕ ಕ್ರಮಗಳೇನು ;

(ಈ) ನೇಕಾರರಿಗೆ ಈ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಳ್ಳಲು ಇರುವ ಮಾನದಂಡಗಳೇನು ?

## ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಸಹಕಾರಿ ಸಂಘಗಳ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೨೨೬ (೨೮೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಹಾಲು ಉತ್ಪಾದಕರ ಸಹಕಾರಿ ಸಂಘಗಳೆಷ್ಟು ; (ತಾಲ್ಲೂಕುವಾರು ಹೆಸರು ವಿಳಾಸ ಒದಗಿಸುವುದು)

(ಆ) ಹಾಲು ಉತ್ಪಾದಕರಿಗೆ ಈವರೆಗೆ ಪ್ರತಿ ಲೀಟರ್‌ಗೆ ಎಷ್ಟು ರೂ.ಗಳ ಸಹಾಯಧನ ನೀಡಲಾಗುತ್ತದೆ ; ರೈತರ ಆತ್ಮಹತ್ಯೆ ಹಿನ್ನೆಲೆಯಿಂದ ಧನ ಸಹಾಯ ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ ;

(ಇ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಪತ್ತಿನ ಸಹಕಾರ ಸಂಘಗಳು ಎಷ್ಟು ; (ತಾಲ್ಲೂಕುವಾರು ಹೆಸರು, ವಿಳಾಸ ಒದಗಿಸುವುದು)

(ಈ) ಜಿಲ್ಲೆಯಲ್ಲಿ ಎಷ್ಟು ಮಹಿಳಾ ಸಹಕಾರ ಸಂಘಗಳು ಇವೆ ? (ತಾಲ್ಲೂಕುವಾರು ಹೆಸರು, ವಿಳಾಸ ಒದಗಿಸುವುದು)

## ರೈತಾಪಿ ವರ್ಗದವರಿಗೆ ನೀಡುತ್ತಿರುವ ಸಾಲ ಸೌಲಭ್ಯವನ್ನು ನೇಕಾರ ವರ್ಗದವರಿಗೂ ಅನ್ವಯಸುವ ಕುರಿತು

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೨೨೭ (೨೮೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ರೈತಾಪಿ ವರ್ಗದವರಿಗೆ ನೀಡುತ್ತಿರುವ ಆರ್ಥಿಕ ಯೋಜನಾ ಸೌಲಭ್ಯಗಳನ್ನು ಬಡ ನೇಕಾರ ವರ್ಗದವರಿಗೂ ನೀಡದಿರುವ ಕುರಿತು ದೂರುಗಳು ಬಂದಿವೆಯೇ ; ಹೌದಾದಲ್ಲಿ, ವಿವರಗಳೇನು;

(ಆ) ಕಳೆದ ೩ ವರ್ಷಗಳಲ್ಲಿ ನೇಕಾರರಿಗೆ ಸಹಕಾರಿ ಬ್ಯಾಂಕುಗಳಲ್ಲಿ ಒದಗಿಸಿ ಕೊಟ್ಟ ಸಾಲ ಸೌಲಭ್ಯವನ್ನು ಯಾವುವು ; (ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು)

(ಇ) ರೈತರಿಗೆ ಸಾಲ ಸೌಲಭ್ಯದ ಮಾನದಂಡ ಪ್ರಕಾರ ಶೇಕಡಾ ಶೂನ್ಯದಂತೆ ನೀಡುತ್ತಿರುವ ಸೌಲಭ್ಯವನ್ನು ಬಡ ನೇಕಾರರಿಗೂ ಅನ್ವಯ ಮಾಡದಿರಲು ಕಾರಣಗಳೇನು ;

(ಈ) ಆರ್ಥಿಕ ಸಾಲಿನ ಆಯವ್ಯಯದಲ್ಲಿ ಕುರಿತಾದ ನಿಲುವನ್ನು ಘೋಷಿಸಲಾಗುವುದೇ ?

## ರಾಜ್ಯದ ಬಡ ನೇಕಾರರಿಗೆ ವಿಶೇಷ ಅನುದಾನದಡಿ ಮೂಲಭೂತ ಸೌಕರ್ಯ ನೀಡುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೨೨೮ (೨೯೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಬಡ ನೇಕಾರರಿಗೆ ಮೂಲಭೂತ ಸೌಕರ್ಯಕ್ಕೂ ವಿಶೇಷ ಅನುದಾನ ನೀಡಲು ಸರ್ಕಾರ ಯೋಚಿಸಿದೆಯೇ ;

(ಆ) ಹಾಗಿದ್ದಲ್ಲಿ, ಕೈಮಗ್ಗ ಅಭಿವೃದ್ಧಿ ನಿಗಮ ವಿದ್ಯುತ್ ಚಾಲಿತ ಅಭಿವೃದ್ಧಿ ನಿಗಮ ಹಾಗೂ ಅಸಂಘಟಿತ ನೇಕಾರರ ಅಭಿವೃದ್ಧಿಗೆ ಸರ್ಕಾರದಿಂದ ಯಾವ ಯಾವ ಅನುದಾನ ನೀಡಲಾಗಿದೆ ;

(ಇ) ಹಲವಾರು ಬಾರಿ ನೇಕಾರರು ಬೇಡಿಕೆ ಸಲ್ಲಿಸಿದ್ದರೂ, ಅನುದಾನ ನೀಡದಿರಲು ಕಾರಣವೇನು ;

(ಈ) ಈ ವರ್ಷದ ಆಯುವ್ಯಯದಲ್ಲಿ ವಿಶೇಷ ಅನುದಾನ ನೀಡಲಾಗುವುದೆ?

## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಕ್ಕೆ ಸೇರಿದ ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಡಿ.ವೈ.ಎಸ್.ಪಿ (ಸಿವಿಲ್) ಇವರ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೨೯ (೩೨೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗೃಹ ಇಲಾಖೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಒಟ್ಟು ಎಷ್ಟು ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಡಿ.ವೈ.ಎಸ್.ಪಿ (ಸಿವಿಲ್) ಗಳು ಕಾರ್ಯನಿರ್ವಹಿಸುತ್ತಿದ್ದಾರೆ ; (ವಿವರದೊಂದಿಗೆ ಮಾಹಿತಿ ನೀಡುವುದು)

(ಆ) ಈ ಅಧಿಕಾರಿಗಳಲ್ಲಿ ಕಳೆದ ಮೂರು ವರ್ಷಗಳಿಂದ ಕಾರ್ಯಕಾರಿ (Executive) ಮತ್ತು ಕಾರ್ಯಕಾರೇತರ (Non-Executive) ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಸಂಖ್ಯೆ ಎಷ್ಟು ; (ವಿವರದೊಂದಿಗೆ ಮಾಹಿತಿ ನೀಡುವುದು)

(ಇ) ಗೃಹ ಇಲಾಖೆಯಲ್ಲಿರುವ ಬ್ಯಾಕ್‌ಲಾಗ್ ಹುದ್ದೆಗಳೆಷ್ಟು ; ಇದರಲ್ಲಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಮತ್ತು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ಸಚಿವಾಲಯದಲ್ಲಿ ಖಾಲಿ ಇರುವ ಗ್ರೂಪ್ 'ಸಿ' ಹುದ್ದೆಗಳಾದ ಬೆರಳಚ್ಚು ಮತ್ತು ಶೀಘ್ರಲಿಪಿಗಾರರ ಹುದ್ದೆಯ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೦ (೩೨೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಖಾಲಿ ಇರುವ ಗ್ರೂಪ್ 'ಸಿ' ಹುದ್ದೆಗಳಾದ ಬೆರಳಚ್ಚು ಮತ್ತು ಶೀಘ್ರಲಿಪಿಗಾರರ ಹುದ್ದೆಗಳೆಷ್ಟು;

(ಆ) ಹಾಗಿದ್ದಲ್ಲಿ, ಈ ಹುದ್ದೆಗಳನ್ನು ತುಂಬಲು ಕ್ರಮ ವಹಿಸಲಾಗಿದೆಯೇ; ತೆಗೆದುಕೊಂಡ ಕ್ರಮದ ಬಗ್ಗೆ ವಿವರ ನೀಡುವುದು ;

(ಇ) ಕರ್ನಾಟಕ ಲೋಕಸೇವಾ ಆಯೋಗಕ್ಕೆ ಬೆರಳಚ್ಚುಗಾರರ ಹಾಗೂ ಶೀಘ್ರಲಿಪಿಗಾರರ ಹುದ್ದೆಗಳನ್ನು ತುಂಬಲು ವಿವಿಧ ಇಲಾಖೆಯಿಂದ ಪ್ರಸ್ತಾವನೆ ಬಂದಿದೆಯೇ ; (ಪೂರ್ಣ ವಿವರ ನೀಡುವುದು)

(ಈ) ಪ್ರಸ್ತಾವನೆ ಬಂದಿದ್ದಲ್ಲಿ, ಅದು ಯಾವ ಹಂತದಲ್ಲಿದೆ ; ಕೈಗೊಂಡ ಕ್ರಮಗಳೇನು ? (ಪೂರ್ಣ ವಿವರ ನೀಡುವುದು)

## ರಾಜ್ಯದ ಮಹಿಳಾ ಪೊಲೀಸ್ ಠಾಣೆಗಳ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೧ (೩೨೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಹೆಚ್ಚುವರಿಯಾಗಿ ಎಷ್ಟು ಮಹಿಳಾ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲು ಮತ್ತು ಎಷ್ಟು ಮಹಿಳಾ ಪೊಲೀಸ್ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ಬೇಡಿಕೆ ಇದೆ ;

(ಆ) ಅತ್ಯಾಚಾರ, ಮಹಿಳೆಯರ ಮೇಲಿನ ದೌರ್ಜನ್ಯ ಇತ್ಯಾದಿ ಮಹಿಳಾ ಪ್ರಕರಣಗಳನ್ನು ತುರ್ತಾಗಿ ನಿರ್ವಹಿಸಲು ಅಗತ್ಯವಿರುವ ಮಹಿಳಾ ಪೊಲೀಸ್ ಠಾಣೆಗಳನ್ನು ತೆರೆಯಲು ಮತ್ತು ಮಹಿಳಾ ಪೊಲೀಸ್ ಸಿಬ್ಬಂದಿಗಳನ್ನು ನೇಮಕ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳಲಾಗುವುದು?

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಸಗಟು ವೈನ್‌ಸ್ಟೋರ್ ಮತ್ತು ಬಾರ್ ಅಂಡ್ ರೆಸ್ಟೋರೆಂಟ್‌ಗಳ ಕುರಿತು

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೨ (೨೩೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಿವಿಧ ರೀತಿಯ ಪರವಾನಗಿಗಳನ್ನು ಹೊಂದಿರುವ ಸಗಟು, ವೈನ್‌ಸ್ಟೋರ್ಸ್ ಮತ್ತು ಬಾರ್ ಅಂಡ್ ರೆಸ್ಟೋರೆಂಟ್‌ಗಳ ಸಂಖ್ಯೆ ಎಷ್ಟು ; (ವಲಯವಾರು ವಿವರಗಳನ್ನು ನೀಡುವುದು)

(ಆ) ವಿವಿಧ ರೀತಿಯ ಪರವಾನಗಿಗಳನ್ನು ನೀಡುವಾಗ ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು ;

(ಇ) ಕೆಲವು ಸಗಟು ಮಾರಾಟಕ್ಕಾಗಿ ಪರವಾನಗಿಯನ್ನು ಪಡೆದು ಚಿಲ್ಲರೆ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಹಾಗಿದ್ದಲ್ಲಿ, ಈ ರೀತಿ ಚಿಲ್ಲರೆ ಮಾರಾಟ ಮಾಡುವ ಮಳಿಗೆಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಉ) ಕಳೆದ ಮೂರು ವರ್ಷಗಳಲ್ಲಿ ಈ ರೀತಿಯ ಎಷ್ಟು ಪ್ರಕರಣಗಳು ದಾಖಲಾಗಿವೆ ಮತ್ತು ಅವುಗಳಿಂದ ವಸೂಲಿ ಮಾಡಲಾದ ದಂಡ ಮೊತ್ತವೆಷ್ಟು ;

(ಊ) ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿನ ಕೆಲವು ಬಾರ್ ಅಂಡ್ ರೆಸ್ಟೋರೆಂಟ್‌ಗಳು ಶುಚಿತ್ವವನ್ನು ಕಾಪಾಡದೆ ಅಬಕಾರಿ ಇಲಾಖೆಯು ರೂಪಿಸಿರುವ ನಿಯಮಗಳನ್ನು ಉಲ್ಲಂಘನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಎ) ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಈ ರೀತಿಯ ಎಷ್ಟು ಪ್ರಕರಣಗಳ ಮೇಲೆ ಸರ್ಕಾರ ಕ್ರಮ ಕೈಗೊಂಡಿದೆ ಹಾಗೂ ಅವರುಗಳ ವಿರುದ್ಧ ಯಾವ ರೀತಿಯ ದಾವೆಗಳನ್ನು ದಾಖಲು ಮಾಡಿಕೊಳ್ಳಲಾಗಿದೆ ಹಾಗೂ ಆ ಪ್ರಕರಣಗಳ ಸಂಖ್ಯೆ ಎಷ್ಟು ; (ವಿವರಗಳನ್ನು ನೀಡುವುದು)

(ಏ) ಸರ್ಕಾರ ಶುಚಿತ್ವವನ್ನು ಕಾಪಾಡದೇ ಇರುವ ಬಾರ್ ಅಂಡ್ ರೆಸ್ಟೋರೆಂಟ್‌ಗಳಿಂದ ವಸೂಲಿ ಮಾಡಲಾದ ದಂಡದ ಮೊತ್ತವೆಷ್ಟು? (ವಲಯಗಳವಾರು ವಿವರಗಳನ್ನು ನೀಡುವುದು)

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಕ್ರಮ ಫ್ಲೆಕ್ಸ್‌ಗಳ ಕುರಿತು

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೩ (೨೩೨) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಲ್ಲಿ ಅಕ್ರಮ ಫ್ಲೆಕ್ಸ್‌ಗಳ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ಅಕ್ರಮ ಫ್ಲೆಕ್ಸ್‌ಗಳ ಹಾವಳಿಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಈ ಅಕ್ರಮ ಫ್ಲೆಕ್ಸ್‌ಗಳ ಹಾವಳಿಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಹಾಗಿದ್ದಲ್ಲಿ, ಈ ಅಕ್ರಮ ಫ್ಲೆಕ್ಸ್‌ಗಳನ್ನು ಅಳವಡಿಸುವವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಉ) ಕಳೆದ ಮೂರು ವರ್ಷಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಅಕ್ರಮ ಫ್ಲೆಕ್ಸ್‌ಗಳನ್ನು ಅಳವಡಿಸುವವರಿಂದ ವಸೂಲಿ ಮಾಡಿರುವ ದಂಡದ ಮೊತ್ತವೆಷ್ಟು ಮತ್ತು ಅವರುಗಳ ಮೇಲೆ ಯಾವ ರೀತಿಯ ದಾವೆಗಳನ್ನು ದಾಖಲಿಸಲಾಗಿದೆ ; (ವಿವರಗಳನ್ನು ನೀಡುವುದು)

(ಊ) ಇನ್ನು ಮುಂದೆಯಾದರು ಸಾರ್ವಜನಿಕ ಸ್ಥಳಗಳಲ್ಲಿ ಅಕ್ರಮ ಫ್ಲೆಕ್ಸ್‌ಗಳನ್ನು ಅಳವಡಿಸುವುದನ್ನು ತಡೆಗಟ್ಟಲು ಸರ್ಕಾರ ಕ್ರಮ ಕೈಗೊಳ್ಳುವುದೇ ; ಹಾಗಿದ್ದಲ್ಲಿ, ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುವುದು ? (ವಿವರಗಳನ್ನು ನೀಡುವುದು)

## ಮೈಸೂರಿನಲ್ಲಿ ಅಕ್ರಮ ಮೀಟರ್ ಬಡ್ಡಿ ದಂಧೆ

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೪ (೨೩೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮೈಸೂರು ನಗರದಲ್ಲಿ ಅಕ್ರಮ ಮೀಟರ್ ಬಡ್ಡಿ ದಂಧೆಯ ಪ್ರಕರಣಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಕಳೆದ ಮೂರು ವರ್ಷಗಳಿಂದ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ; ಎಷ್ಟು ಮೊಕದ್ದಮೆಗಳನ್ನು ದಾಖಲಿಸಲಾಗಿದೆ ;

(ಆ) ಈಚೆಗೆ ಪೊಲೀಸ್ ಪೇದೆಯೊಬ್ಬರು ಅಕ್ರಮ ಮೀಟರ್ ಬಡ್ಡಿ ದಂಧೆಗೆ ಬಲಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಪ್ರಕರಣದಲ್ಲಿ ಕೈಗೊಂಡಿರುವ ಕ್ರಮಗಳೇನು ;

(ಇ) ಅಕ್ರಮ ಮೀಟರ್ ಬಡ್ಡಿ ದಂಧೆಯನ್ನು ತಡೆಗಟ್ಟಲು ಗೃಹ ಇಲಾಖೆಯು, ಸಹಕಾರ ಇಲಾಖೆ ಮತ್ತು ಸರ್ಕಾರದ ಇತರೆ ಇಲಾಖೆಗಳ ಸಹಕಾರ ಪಡೆದು ಕ್ರಮ ಜರುಗಿಸುವುದೇ ?

## ಚಾಮರಾಜನಗರ ಕುಡಿಯುವ ನೀರಿನ ಯೋಜನೆ

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೫ (೨೩೭) ಮಾನ್ಯ ನಗರಾಭಿವೃದ್ಧಿ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಾಮರಾಜನಗರದಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ; ಈ ನಗರಕ್ಕೆ ಕುಡಿಯುವ ನೀರಿನ ಹೆಚ್ಚುವರಿ ಕೊಳವೆ ಮಾರ್ಗ ಅಳವಡಿಕೆ ನೆನೆಗುದಿಗೆ ಬಿದ್ದಿದ್ದು, ನಾಲ್ಕೈದು ವರ್ಷವಾದರೂ ಅನುಷ್ಠಾನವಾಗದಿರುವುದು ; ಹಾಗೂ ಈಗಿರುವ ಪೈಪ್‌ಲೈನ್ ಕೂಡಾ ಹಳೆಯದಾಗಿದ್ದು, ಅದನ್ನು ಬದಲಾಯಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಚಾಮರಾಜನಗರಕ್ಕೆ ಹೆಚ್ಚುವರಿ ಹೊಸ ಕುಡಿಯುವ ನೀರು ಸರಬರಾಜಿನ ಕೊಳವೆ ಮಾರ್ಗ ಅಳವಡಿಕೆ, ರೈಸಿಂಗ್ ಮೇನ್ ಹಾಗೂ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರಕ್ಕೆ ೬೫ ಕೋಟಿ ರೂಪಾಯಿಗಳ ಪ್ರಸ್ತಾವನೆ ಸಲ್ಲಿಸಲ್ಪಟ್ಟಿದೆಯೇ ;

ಈ ಯೋಜನೆಗೆ ಅನುಮೋದನೆ, ಮಂಜೂರಾತಿ ಮತ್ತು ಅನುದಾನ ಬಿಡುಗಡೆಗೆ ಸರ್ಕಾರ ಕ್ರಮ ತೆಗೆದುಕೊಳ್ಳುವುದು ;

(ಇ) ಚಾಮರಾಜನಗರದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯ ಮೂಲಕ ನೀರು ಸರಬರಾಜು ಹೊಂದಿರುವ ಎಷ್ಟು ಮನೆಗಳಿವೆ ; ಎಷ್ಟು ಮನೆಗಳಿಗೆ ಮೀಟರ್ ಅಳವಡಿಸಲಾಗುತ್ತಿದೆ; ಇನ್ನೂ ಎಷ್ಟು ಮನೆಗಳಿಗೆ ಅಳವಡಿಸಬೇಕಾಗಿದೆ ; ನೀರು ಸರಬರಾಜಾಗದಿದ್ದರೂ ಮೀಟರ್ ಅಳವಡಿಕೆಯಿಂದ ಹೆಚ್ಚಿನ ಪ್ರಮಾಣದ ಬಿಲ್ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

## ವಾಣಿ ವಿಲಾಸ್ ನೀರು ಸರಬರಾಜು ಕೇಂದ್ರದಲ್ಲಿ ಟ್ಯಾಂಕರ್ ನೀರಿನ ದುರ್ಬಳಕೆ

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೬ (೨೩೮) ಮಾನ್ಯ ನಗರಾಭಿವೃದ್ಧಿ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಾಣಿ ವಿಲಾಸ ನೀರು ಸರಬರಾಜು ಕೇಂದ್ರದಿಂದ ಪ್ರತಿದಿನ ಎಷ್ಟು ಸಾವಿರ ಲೀಟರ್ ನೀರನ್ನು ಖರೀದಿಸಲಾಗುತ್ತಿದ್ದು, ನೀರಿನ ಖರೀದಿ ದರ ಎಷ್ಟು ; ನೀರಿನ ಖರೀದಿಗೆ ನಿಗದಿಪಡಿಸಿರುವ ಮಾನದಂಡಗಳೇನು ;

(ಆ) ಖಾಸಗಿ ಸಂಸ್ಥೆಗಳವರು ವಾಣಿ ವಿಲಾಸ ನೀರು ಸರಬರಾಜು ಕೇಂದ್ರದಿಂದ ನೀರನ್ನು ಖರೀದಿಸಿ ಹೆಚ್ಚು ಬೆಲೆಗೆ ಮಾರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದನ್ನು ತಡೆಗಟ್ಟಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ ;

(ಇ) ಯಾವುದೇ ಬಡಾವಣೆಗೆ ವಾಣಿ ವಿಲಾಸ ನೀರು ಸರಬರಾಜು ಕೇಂದ್ರದಿಂದ ನೀರು ಪೂರೈಕೆಯಾಗದಿದ್ದಲ್ಲಿ ಉಚಿತವಾಗಿ ಆ ಬಡಾವಣೆಗಳಿಗೆ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲು ಕ್ರಮ ತೆಗೆದುಕೊಳ್ಳಲಾಗುವುದೇ ; ಇಲ್ಲದಿದ್ದಲ್ಲಿ, ಕಾರಣ ಸಹಿತ ವಿವರ ನೀಡುವುದು ?

**ಅನುಕಂಪ ಆಧಾರಿತ ನೌಕರಿ**

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೭ (೨೩೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅನುಕಂಪದ ಆಧಾರದ ಮೇಲೆ ಉದ್ಯೋಗವನ್ನು ನೀಡುವ ನಿಯುಮಗಳನ್ನು ಪರಿಷ್ಕರಿಸಲಾಗಿದೆಯೇ ; ಪರಿಷ್ಕೃತ ನಿಯಮಗಳು ಎಂದಿನಿಂದ ಜಾರಿಯಲ್ಲಿದೆ ; ಅದರ ಮುಖ್ಯ ಅಂಶಗಳೇನು ; ಪ್ರಸ್ತುತ ಜಾರಿಯಲ್ಲಿರುವ ನಿಯಮ ನಿಬಂಧನೆಗಳೇನು ; (ಆದೇಶದ ಎಲ್ಲಾ ಪ್ರತಿಗಳನ್ನು ಒದಗಿಸುವುದು)

(ಆ) ಅನುಕಂಪದ ಆಧಾರದ ಮೇಲೆ ಉದ್ಯೋಗಾವಕಾಶ ಕೋರಿ ಬಂದಿರುವ ಎಷ್ಟು ಅರ್ಜಿಗಳು ಬಾಕಿ ಇವೆ ; (ಕಾರಣ ಸಹಿತ ವಿವರ ಒದಗಿಸುವುದು) ಸದರಿ ಅರ್ಜಿಗಳನ್ನು ಯಾವ ಕಾಲಮಿತಿಯೊಳಗೆ ಇತ್ಯರ್ಥಗೊಳಿಸಲಾಗುವುದು ?

## ರಾಜ್ಯದಲ್ಲಿ ಹೆಚ್ಚುತ್ತಿರುವ ಮಹಿಳೆ ಮತ್ತು ಮಕ್ಕಳ ನಾಪತ್ತೆ ಪ್ರಕರಣಗಳ ಬಗ್ಗೆ

**ಶ್ರೀ ಕೆ.ವಿ.ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೮ (೨೪೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಮಹಿಳೆ ಮತ್ತು ಮಕ್ಕಳ ನಾಪತ್ತೆ ಪ್ರಕರಣ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ೨೦೧೨ರಿಂದ ಇಲ್ಲಿಯವರೆಗೆ ದಾಖಲಾದ ನಾಪತ್ತೆ ಪ್ರಕರಣಗಳೆಷ್ಟು ; (ಜಿಲ್ಲಾವಾರು ವರ್ಷವಾರು ಸಂಪೂರ್ಣ ವಿವರ ನೀಡುವುದು)

(ಇ) ಸದರಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಪತ್ತೆಯಾದ ಹಾಗೂ ಪತ್ತೆಯಾಗದ ಪ್ರಕರಣಗಳೆಷ್ಟು ; (ಜಿಲ್ಲಾವಾರು ವರ್ಷವಾರು ಸಂಪೂರ್ಣ ವಿವರ ನೀಡುವುದು)

(ಈ) ಪತ್ತೆಯಾಗದ ಪ್ರಕರಣಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಒಳ ಚರಂಡಿಯ ಬಗ್ಗೆ

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೯ (೨೭೮) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಳ ಚರಂಡಿಯಿಂದ ಬರುವ ಚರಂಡಿ ನೀರನ್ನು ಮಂಡಳಿಯಿಂದ ಸಂಸ್ಕರಣೆ ಮಾಡುತ್ತಿರುವುದು ನಿಜವೇ ;

(ಆ) ಹಾಗಿದ್ದರೆ, ಆ ಚರಂಡಿ ನೀರಿನ ಪ್ರಮಾಣ ಎಷ್ಟು ; ಮಂಡಳಿಯಿಂದ ಸಂಸ್ಕರಣೆ ಮಾಡುತ್ತಿರುವ ನೀರಿನ ಪ್ರಮಾಣ ಎಷ್ಟು ; ಉಳಿಕೆ ನೀರಿನ ಸಂಸ್ಕರಣಕ್ಕೆ ಮಂಡಳಿಯಿಂದ ತೆಗೆದುಕೊಂಡಿರುವ ಕ್ರಮಗಳೇನು ?

## ಅನಧಿಕೃತ ಗ್ರಾಹಕರ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೪೦ (೨೭೭) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ನೀರು ಉಪಯೋಗಿಸುತ್ತಿರುವ ಒಟ್ಟು ಗ್ರಾಹಕರ ಸಂಖ್ಯೆ ಎಷ್ಟು ; ಹಾಗೂ ಅನಧಿಕೃತ ಗ್ರಾಹಕರ ಸಂಖ್ಯೆ ಎಷ್ಟು ;

(ಆ) ಈ ವ್ಯಾಪ್ತಿಯಲ್ಲಿ ಬರುವ ಒಟ್ಟು ವಸತಿಗಳ ಸಂಖ್ಯೆ ಎಷ್ಟು ; ಈ ಬಗ್ಗೆ ಸರ್ವೆ ಕಾರ್ಯವನ್ನು ಕೈಗೊಳ್ಳಲಾಗಿದೆಯೇ ; ಮಾಡಲಾಗಿದ್ದಲ್ಲಿ, ಒಟ್ಟು ವಸತಿಗಳ ಸಂಖ್ಯೆ ಎಷ್ಟು ? (ವಿವರವನ್ನು ಒದಗಿಸುವುದು)

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರಾಜಕಾಲುವೆಗಳ ಮೇಲೆ ಕಟ್ಟಡಗಳ ತೆರವುಗೊಳಿಸುವ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೪೧ (೨೫೩) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜಕಾಲುವೆಯ ಮೇಲೆ ನಿರ್ಮಾಣವಾಗಿರುವ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವ ಕಾರ್ಯವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕೈಗೆತ್ತಿಕೊಂಡಿರುವುದು ನಿಜವೇ;

(ಆ) ಹಾಗಿದ್ದರೆ, ಇದುವರೆವಿಗೂ ಎಷ್ಟು ಅಂತಹ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಲಾಗಿದೆ ; ಇನ್ನು ಎಷ್ಟು ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವ ಕಾರ್ಯ ಬಾಕಿ ಇದೆ ; (ಪೂರ್ಣ ವಿವರ ನೀಡುವುದು)

(ಇ) ಕೆಲವು ಅನಧಿಕೃತ ದೊಡ್ಡ ಮಾಲ್‌ಗಳನ್ನು ತೆರವುಗೊಳಿಸದಿರಲು ಕಾರಣವೇನು ? (ವಿವರ ನೀಡುವುದು)

## ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಜಾಲತಾಣಗಳ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೪೨ (೩೨೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಜಾಲತಾಣ (Website) ಗಳು ಕಾರ್ಯ ನಿರ್ವಹಣೆಯಲ್ಲಿರುವುದು ನಿಜವೇ ;

(ಆ) ಹಾಗಿದ್ದರೆ, ಒಟ್ಟು ಎಷ್ಟು ಇಲಾಖೆಗಳಲ್ಲಿನ ಜಾಲತಾಣಗಳು ಕಾರ್ಯನಿರ್ವಹಿಸುತ್ತಿವೆ, ಒಟ್ಟು ಎಷ್ಟು ಇಲಾಖೆಯ ಜಾಲತಾಣಗಳು ಸರ್ಕಾರದ ಅಡಿಯಲ್ಲಿ ನಿರ್ವಹಣೆಯಲ್ಲಿದೆ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ನಿರ್ವಹಣೆಯಲ್ಲಿರುವ ಜಾಲತಾಣಗಳ ಸಂಖ್ಯೆ ಎಷ್ಟು ; ಪ್ರತಿ ಇಲಾಖೆಯ ಜಾಲತಾಣಗಳ ನಿರ್ವಹಣೆಗಾಗಿ ಸರ್ಕಾರದಿಂದ ಪ್ರತಿ ವರ್ಷ ಭರಿಸುತ್ತಿರುವ ಹಣವೆಷ್ಟು ; ಖಾಸಗಿ ಸಹಭಾಗಿತ್ವದಲ್ಲಿ ನಿರ್ವಹಣೆಯಾಗುತ್ತಿರುವ ಜಾಲತಾಣಗಳು ಎಷ್ಟು ; (ಪೂರ್ಣ ವಿವರ ನೀಡುವುದು)

(ಇ) ಸರ್ಕಾರದ ಜಾಲತಾಣಗಳ ನಿರ್ವಹಣೆಗಾಗಿ ಖಾಸಗಿ ಸಂಸ್ಥೆಯವರು ಅಥವಾ ಖಾಸಗಿ ಕಂಪನಿಯವರು ಅನುಸರಿಸಬೇಕಾದ

ಮಾನದಂಡಗಳೇನು ; ಖಾಸಗಿ ಸಂಸ್ಥೆ ಅಥವಾ ಕಂಪನಿಯವರಿಗೆ ಅನುಮತಿ ನೀಡುವ ಅಧಿಕಾರ ಯಾರಿಗೆ ನೀಡಲಾಗಿದೆ ? (ವಿವರ ನೀಡುವುದು)

## ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಗ್ರೂಪ್ ಎ ಮತ್ತು ಬಿ ಶ್ರೇಣಿ ಅಧಿಕಾರಿಗಳ ಬಗ್ಗೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೪೩ (೨೬೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಕೆ.ಎ.ಎಸ್., ಕೆ.ಇ.ಎಸ್., ನಂತಹ ಗ್ರೂಪ್ ಎ ಮತ್ತು ಬಿ ಅಧಿಕಾರಿಗಳ ಸಂಖ್ಯೆ ಎಷ್ಟು ; ಅವರು ಯಾವ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ; ಅವರು ಸೇವೆಗೆ ಸೇರಿದ ದಿನಾಂಕ ಮತ್ತು ನಿವೃತ್ತಿಯ ದಿನಾಂಕ ಯಾವುದು ; ಇವರಲ್ಲಿ ನೇರ ನೇಮಕಾತಿ ಹೊಂದಿದವರ ಮತ್ತು ಬಡ್ತಿಯಿಂದ ಸ್ಥಾನ ಪಡೆದವರ ಸಂಖ್ಯೆ ಎಷ್ಟು ; (ಇಲಾಖಾವಾರು, ಹುದ್ದೆವಾರು, ಹೆಸರುವಾರು ಮಾಹಿತಿ ಒದಗಿಸುವುದು)

(ಆ) ಈ ಅಧಿಕಾರಿಗಳಲ್ಲಿ ಇಲಾಖಾ ತನಿಖೆ ದಾಖಲಾಗಿರುವವರ ಮತ್ತು ನಡೆಸಲಾಗಿರುವವರ ಸಂಖ್ಯೆ ಎಷ್ಟು ; ಕ್ರಿಮಿನಲ್ ಪ್ರಕರಣ ದಾಖಲಾಗಿರುವವರ ಸಂಖ್ಯೆ ಎಷ್ಟು ; ಅವರ ವಿರುದ್ಧ ಜರುಗಿಸಿದ ಕ್ರಮವೇನು ? (ಹುದ್ದೆವಾರು, ಹೆಸರುವಾರು, ಇಲಾಖಾ ತನಿಖೆ ಮತ್ತು ಕ್ರಿಮಿನಲ್ ಪ್ರಕರಣವಾರು ಮಾಹಿತಿ ಒದಗಿಸುವುದು)

# ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್., ಅಧಿಕಾರಿಗಳ ಬಗ್ಗೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೪೪ (೨೬೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಐ.ಎ.ಎಸ್., ಐ.ಪಿ.ಎಸ್., ಮತ್ತು ಐ.ಎಫ್.ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು ; ಅವರು ಯಾವ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ; ಅವರು ಸೇವೆಗೆ ಸೇರಿದ ದಿನಾಂಕ ಮತ್ತು ನಿವೃತ್ತಿಯ ದಿನಾಂಕ ಯಾವುದು ; (ಇಲಾಖಾವಾರು, ಹುದ್ದೆವಾರು, ಹೆಸರುವಾರು ಮಾಹಿತಿ ಒದಗಿಸುವುದು)

(ಆ) ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಐ.ಎ.ಎಸ್., ಐ.ಪಿ.ಎಸ್., ಮತ್ತು ಐ.ಎಫ್.ಎಸ್. ಅಧಿಕಾರಿಗಳಲ್ಲಿ ನೇರ ನೇಮಕಾತಿ ಹೊಂದಿದವರ ಮತ್ತು ಬಡ್ತಿಯಿಂದ ಸ್ಥಾನ ಪಡೆದವರ ಸಂಖ್ಯೆ ಎಷ್ಟು ; (ಇಲಾಖಾವಾರು, ಹುದ್ದೆವಾರು, ಹೆಸರುವಾರು ಮಾಹಿತಿ ನೀಡುವುದು)

(ಇ) ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಐ.ಎ.ಎಸ್., ಐ.ಪಿ.ಎಸ್., ಮತ್ತು ಐ.ಎಫ್.ಎಸ್. ಅಧಿಕಾರಿಗಳಲ್ಲಿ ಇಲಾಖಾ ತನಿಕೆ ದಾಖಲಾಗಿರುವವರ ಸಂಖ್ಯೆ ಎಷ್ಟು ; ಕ್ರಿಮಿನಲ್ ಪ್ರಕರಣ ದಾಖಲಾಗಿರುವವರ ಸಂಖ್ಯೆ ಎಷ್ಟು ; ಅವರ ವಿರುದ್ಧ ಜರುಗಿಸಿದ ಕ್ರಮದ ಮಾಹಿತಿಯನ್ನು ನೀಡುವುದು ? (ಹುದ್ದೆವಾರು, ಹೆಸರುವಾರು, ಇಲಾಖಾ ತನಿಖಾವಾರು, ಕ್ರಿಮಿನಲ್ ಪ್ರಕರಣವಾರು ಮಾಹಿತಿ ನೀಡುವುದು)

## ವಿವಿಧ ಇಲಾಖೆಗಳಿಂದ ದಾಖಲಾದ ಪ್ರಕರಣದ ಬಗ್ಗೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೪೫ (೨೬೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೩ ವರ್ಷಗಳಲ್ಲಿ ರಾಜ್ಯದ ವಿವಿಧ ಇಲಾಖೆಗಳಿಂದ ವಿವಿಧ ಠಾಣೆಗಳಲ್ಲಿ ಸರಕಾರಿ ನೌಕರರ ಮೇಲೆ ಮತ್ತು ಖಾಸಗಿಯವರ ಮೇಲೆ ದಾಖಲಾದ ದೂರುಗಳೆಷ್ಟು ; ಬಾಕಿ ಪ್ರಕರಣಗಳೆಷ್ಟು ; (ಇಲಾಖಾವಾರು, ಪ್ರಕರಣವಾರು, ಜಿಲ್ಲಾವಾರು ವಿವರ ನೀಡುವುದು)

(ಆ) ವಿವಿಧ ಇಲಾಖೆಗಳಿಂದ ಸರಕಾರಿ ನೌಕರರ ಮೇಲೆ ನೀಡಿದ ದೂರುಗಳಲ್ಲಿ 'ಬಿ' ರಿಪೋರ್ಟ್ ಆದ ಪ್ರಕರಣಗಳೆಷ್ಟು ; ಸರಕಾರದ ಸ್ವತ್ತುಗಳು ಮತ್ತು ಸರಕಾರಕ್ಕೆ ಆದ ನಷ್ಟಕ್ಕೆ 'ಬಿ' ಶೀಟ್ ಹಾಕಲು ಪೂರಕವಾಗಿರತಕ್ಕಂತಹ ದೂರು ನೀಡಿದ ಇಲಾಖೆಯ ಮೇಲೆ ಕ್ರಮ ಕೈಗೊಳ್ಳಲಾಗುವುದೆ ; ಈ ಬಗ್ಗೆ ಸರ್ಕಾರದ ನಿಲುವೇನು;

(ಇ) ವಿವಿಧ ಇಲಾಖೆಗಳಿಂದ ಸರ್ಕಾರಕ್ಕೆ ಆದ ನಷ್ಟ ಮತ್ತು ಮೋಸಕ್ಕೆ ಖಾಸಗಿಯವರ ಮೇಲೆ ದೂರು ಸಲ್ಲಿಸಿದಾಗ 'ಬಿ' ಶೀಟ್ ಆದ ಪ್ರಕರಣಗಳೆಷ್ಟು ; ಇಂತಹ ಪ್ರಕರಣಗಳನ್ನು ಸರಕಾರವು ಮರುಪರಿಶೀಲಿಸುವುದೇ ; ಇಲ್ಲವಾದಲ್ಲಿ, ಸಂಬಂಧಪಟ್ಟವರನ್ನು ಹೊಣೆಗಾರರನ್ನಾಗಿಸುವುದೇ ; ಈ ಬಗ್ಗೆ ಸರ್ಕಾರದ ಕ್ರಮವೇನು? (ವಿವರ ನೀಡುವುದು)

## ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಯ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೪೬ (೨೬೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆ, ಬ್ರಹ್ಮಾವರ ಇದರ ಒಟ್ಟು ವಿಸ್ತೀರ್ಣವೆಷ್ಟು ; ಈ ಕಾರ್ಖಾನೆಯಿಂದ ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಪಾವತಿಗೆ ಬಾಕಿಯಿರುವ ಹಣವೆಷ್ಟು;

(ಆ) ಈ ಕಾರ್ಖಾನೆಯು ನಿಲುಗಡೆಯಾದ ದಿನಾಂಕದಿಂದ ಇಲ್ಲಿಯವರೆಗೆ ವಿವಿಧ ಶೀರ್ಷಿಕೆಯಡಿಯಲ್ಲಿ ಖರ್ಚಾದ ವೆಚ್ಚ ಮತ್ತು ಸಂಗ್ರಹಿತ ಆದಾಯವೆಷ್ಟು ;

(ಇ) ಈ ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವ ಯೋಜನೆ ಸರ್ಕಾರದ ಮುಂದಿದೆಯೇ ; ಇಲ್ಲವಾದಲ್ಲಿ, ರೈತರಿಗೆ ಅನುಕೂಲವಾಗುವ ಕೃಷಿ/ತೋಟಗಾರಿಕಾ ಅಥವಾ ಪಶುಸಂಗೋಪನಾ ವಿಶ್ವವಿದ್ಯಾನಿಲಯ ತೆರೆಯುವ ಯೋಜನೆ ಸರ್ಕಾರದ ಮುಂದಿದೆಯೇ ?

## ಕಿಂಡಿ ಅಣೆಕಟ್ಟೆಗಳ ನಿರ್ವಹಣೆಗಾಗಿ ಗ್ರಾಮ ಪಂಚಾಯತಿಗಳಿಗೆ ಅನುದಾನ ಒದಗಿಸುವ ಬಗ್ಗೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೪೭ (೨೬೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಿ ಪ್ರತಿ ವರ್ಷ ಕಿಂಡಿ ಅಣೆಕಟ್ಟುಗಳನ್ನು ನಿರ್ಮಿಸುತ್ತಿದ್ದು, ಅದರ ನಿರ್ವಹಣೆ

ಸಕಾಲದಲ್ಲಿ ಆಗದಿರುವುದರಿಂದ ರೈತರಿಗೆ ಪ್ರಯೋಜನಕ್ಕೆ, ಬಾರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಕಿಂಡಿ ಅಣೆಕಟ್ಟೆಗಳ ನಿರ್ವಹಣೆಯ ಅನುದಾನವನ್ನು ಸ್ಥಳೀಯ ಸಂಸ್ಥೆಯಾದ ಗ್ರಾಮ ಪಂಚಾಯಿತಿಗೆ ನೀಡಲು ಆರ್ಥಿಕ ಇಲಾಖೆಯ ತೊಡಕುಗಳೇನು ; ತೊಡಕುಗಳು ಇಲ್ಲವಾದರೆ, ಈ ಬಗ್ಗೆ ಸರ್ಕಾರದ ಕ್ರಮವೇನು ?

## ಶಿವಮೊಗ್ಗ ನಗರ ಪಾಲಿಕೆಯಲ್ಲಿ ಪೌರಕಾರ್ಮಿಕರ ಹುದ್ದೆ ಬಗ್ಗೆ

**ಶ್ರೀ ಆರ್.ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೪೮ (೨೬೭) ಮಾನ್ಯ ನಗರಾಭಿವೃದ್ಧಿ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಶಿವಮೊಗ್ಗ ಮಹಾನಗರ ಪಾಲಿಕೆಯಲ್ಲಿರುವ ಪೌರ ಕಾರ್ಮಿಕರುಗಳ ಹುದ್ದೆ ಎಷ್ಟು ; ಇದರಲ್ಲಿ ಖಾಯಂ ಹೊರಗುತ್ತಿಗೆ ಆಧಾರದ ಮೇರೆಗೆ ಎಷ್ಟು ಜನ ಪೌರ ಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ ;

(ಆ) ಕಛೇರಿಯ ನಿರ್ವಹಣೆ ಹಾಗೂ ಬೇರೆ ಬೇರೆ ವಿಭಾಗಗಳಲ್ಲಿ ಖಾಯಂ, ಹೊರಗುತ್ತಿಗೆ ಆಧಾರದ ಮೇರೆಗೆ ಎಷ್ಟು ಜನ ಪೌರ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ ;

(ಇ) ಹೊರ ಗುತ್ತಿಗೆಯ ಏಜೆನ್ಸಿಗಳು ಯಾವುವು ; ಹಾಗೂ ಎಷ್ಟು ವರ್ಷಗಳಿಂದ ಈ ಏಜೆನ್ಸಿಯು ಮೂಲಕ ಕಾರ್ಯ ನಿರ್ವಹಿಸುತ್ತಿರುತ್ತಾರೆ ; (ವಿವರ ನೀಡುವುದು)

(ಈ) ಎಲ್ಲಾ ಹೊರ ಗುತ್ತಿಗೆಯ ಏಜೆನ್ಸಿಗಳಿಗೆ ಪ್ರತಿ ತಿಂಗಳು ಎಷ್ಟು ಹಣ ಸಂದಾಯ ಮಾಡಲಾಗುತ್ತಿದೆ ; ಇದರಲ್ಲಿ ಅವರ ಸೇವಾ ಶುಲ್ಕವೆಷ್ಟು ;

(ಉ) ಶಿವಮೊಗ್ಗ ಮಹಾನಗರ ಪಾಲಿಕೆಯಲ್ಲಿ ನಗರ ಯೋಜನಾ ಸದಸ್ಯರುಗಳ ಹುದ್ದೆ ಇದ್ದು, ಈ ಹುದ್ದೆಗೆ ಇದುವರೆಗೂ ನೇಮಕಾತಿ ಆಗದೇ ಇರುವುದರಿಂದ ಕಟ್ಟಡ ಪರವಾನಗಿಯನ್ನು ಪಡೆಯಲು ಸಾರ್ವಜನಿಕರಿಗೆ ಆಗುತ್ತಿರುವ ಸಮಸ್ಯೆಯು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಬಂದಿದ್ದಲ್ಲಿ, ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ ? (ವಿವರಗಳನ್ನು ನೀಡುವುದು)

## ತೆರಿಗೆ ವಿನಾಯಿತಿ ಪಡೆದ ಆಸ್ತಿ ಮತ್ತು ಕಟ್ಟಡಗಳ ವಿವರದ ಬಗ್ಗೆ

**ಶ್ರೀ ರಿಜ್ವಾನ್ ಅರ್ಷದ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೪೯ (೨೪೮) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆಯಿಂದ ವಿನಾಯಿತಿ ಪಡೆದಿರುವ ಕಟ್ಟಡಗಳು ಯಾವುವು, ಅವುಗಳ ವಿಳಾಸ ಹಾಗೂ ಎಂದಿನಿಂದ ವಿನಾಯಿತಿ ಪಡೆಯುತ್ತಿವೆ; ಕಟ್ಟಡಗಳು ಖಾಸಗಿ ಒಡೆತನದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಸರ್ಕಾರಿ ಒಡೆತನದಲ್ಲಿರುವ ಜಾಗಗಳ ಕಟ್ಟಡಗಳೆಷ್ಟು ; (ವಿವರ ಒದಗಿಸುವುದು)

(ಆ) ಯಾವ ಉದ್ದೇಶಕ್ಕಾಗಿ ಆಸ್ತಿ ತೆರಿಗೆಯಲ್ಲಿ ವಿನಾಯಿತಿ ಕೋರಿವೆ; ಕಟ್ಟಡದ ವಿಸ್ತೀರ್ಣ ಎಷ್ಟು ; ಕಟ್ಟಡದ ವಿಸ್ತೀರ್ಣ ಹೊರತಾಗಿ ಇರುವ ಜಾಗದ ವಿವರ ಎಷ್ಟು ; ಈಗ ವಿಧಿಸಲಾಗುತ್ತಿರುವ

ತೆರಿಗೆ ಎಷ್ಟು ಹಾಗೂ ವಿನಾಯತಿ ನೀಡಿರುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಪ್ರತಿ ವರ್ಷ ಆಗುತ್ತಿರುವ ಅಂದಾಜು ನಷ್ಟವೆಷ್ಟು ;

(ಇ) ಮೊದಲ ಸಲ ವಿನಾಯಿತಿ ಪಡೆದಂತಹ ಸಂದರ್ಭದಲ್ಲಿ ಇದ್ದಂತಹ ಕಟ್ಟಡದ ವಿಸ್ತೀರ್ಣ ಎಷ್ಟು ; ನಂತರ ಕಟ್ಟಡವನ್ನು ವಿಸ್ತರಿಸಿಕೊಳ್ಳಲಾಗಿದೆಯೇ ; ಯಾವ ಯಾವಾಗ ಎಷ್ಟೆಷ್ಟು ವಿಸ್ತರಿಸಿಕೊಳ್ಳಲಾಗಿದೆ ; ವಿಸ್ತರಿಸಿಕೊಳ್ಳಲು ಅನುಮತಿ ನೀಡುವಾಗ ವಿಧಿಸಿದ್ದ ತೆರಿಗೆಯನ್ನು ಪರಿಷ್ಕರಿಸಲಾಗಿದೆಯೇ ? (ಪೂರ್ಣ ವಿವರ ನೀಡುವುದು)

## ಬದಲಿ ನಿವೇಶನಗಳ ಲಭ್ಯತೆ ಕುರಿತು

**ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೨೫೦ (೨೬೧) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

ಬೆಂಗಳೂರು ನಗರಾಭಿವೃದ್ಧಿಗೆ ಪ್ರಾಧಿಕಾರದ ವ್ಯಾಪ್ತಿಗೆ ಬರುವ ಎಚ್.ಎಸ್.ಆರ್., ಒ.ಎಂ.ಬಿ.ಆರ್ ಬಡಾವಣೆ ಹಾಗೂ ಎಚ್.ಬಿ.ಆರ್. ಬಡಾವಣೆಗಳಲ್ಲಿ ಲಭ್ಯವಿರುವ ಬದಲಿ ನಿವೇಶನಗಳ ಸಂಖ್ಯೆ ಎಷ್ಟು ? (ಬಡಾವಣೆವಾರು ನಿವೇಶನಗಳ ಸಂಖ್ಯೆ ಸಹಿತ ಮಾಹಿತಿ ಒದಗಿಸುವುದು)

## ಬದಲಿ ನಿವೇಶನಗಳ ಹಂಚಿಕೆ ಬಗ್ಗೆ

**ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೨೫೧ (೨೩೩) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಅಭಿವೃದ್ಧಿಗೆ ಪ್ರಾಧಿಕಾರ (ಬಿಡಿಎ)ದಿಂದ ಕಳೆದ ೩ ವರ್ಷಗಳಲ್ಲಿ ಹಂಚಿಕೆಯಾದ ಬದಲಿ ನಿವೇಶನಗಳ ಸಂಖ್ಯೆ ಎಷ್ಟು; (ಮಾಹಿತಿ ಒದಗಿಸುವುದು)

(ಆ) ಯಾವ ಮಾನದಂಡದ ಮೇಲೆ ಬದಲಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ; (ಮಾಹಿತಿ ಒದಗಿಸುವುದು)

(ಇ) ಬಡಾವಣೆವಾರು ಹಂಚಿಕೆಯಾದ ಫಲಾನುಭವಿಗಳು ಮತ್ತು ನಿವೇಶನಗಳ ಸಂಖ್ಯೆ ಎಷ್ಟು ? (ಮಾಹಿತಿ ನೀಡುವುದು)

## ಕುಡಿಯುವ ನೀರಿನ ಯೋಜನೆಗೆ ಬಿಡುಗಡೆಯಾದ ಅನುದಾನ

**ಶ್ರೀ ಕೆ. ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೫೨ (೨೭೯) ಮಾನ್ಯ ನಗರಾಭಿವೃದ್ಧಿ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ನಗರಕ್ಕೆ ಪ್ರತಿನಿತ್ಯ ಕುಡಿಯುವ ನೀರಿನ ಸರಬರಾಜು ಮಾಡುವ ಯೋಜನೆ ಪ್ರಸ್ತುತ ಯಾವ ಹಂತದಲ್ಲಿದೆ ; (ಕಾಮಗಾರಿಗಳು ಹಾಗೂ ಗುತ್ತಿಗೆದಾರರ ವಿವರ ನೀಡುವುದು)

(ಆ) ಈ ಯೋಜನೆಗೆ ೨೦೧೫–೧೬ ಹಾಗೂ ೨೦೧೬–೧೭ನೇ ಸಾಲಿನಲ್ಲಿ ನಿಗಧಿಪಡಿಸಲಾದ ಮತ್ತು ಬಿಡುಗಡೆಗೊಳಿಸಲಾದ ಅನುದಾನ ಎಷ್ಟು ;

(ಇ) ಈವರೆಗೆ ವ್ಯಯಿಸಲಾದ ಹಾಗೂ ಬಳಕೆಯಾಗದೆ ಉಳಿದಿರುವ ಅನುದಾನವೆಷ್ಟು ; (ವರ್ಷಾವಾರು/ಕಾಮಗಾರಿವಾರು ವಿವರ ನೀಡುವುದು)

(ಈ) ಈ ಯೋಜನೆಯ ಕಾಮಗಾರಿಗಳಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳಲಾಗುತ್ತಿದೆಯೇ ; (ವಿವರ ನೀಡುವುದು)

(ಉ) ಪ್ರಸ್ತುತ ಬೀದರ್ ನಗರದಲ್ಲಿ ಪ್ರತಿನಿತ್ಯ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು?

## ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳು

**ಶ್ರೀ ಕೆ. ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೫೩ (೨೮೦) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯ ಎಲ್ಲಾ ತಾಲ್ಲೂಕಿನ ವಿವಿಧ ಇಲಾಖೆಗಳಿಗೆ ಮಂಜೂರಾತಿಯಾಗಿರುವ ಹುದ್ದೆಗಳೆಷ್ಟು ; ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು ; (ಇಲಾಖೆ ಮತ್ತು ಹುದ್ದೆಗಳವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ; ಖಾಲಿ ಹುದ್ದೆಗಳನ್ನು ತುಂಬಲು ಬೇಕಾಗುವ ಕಾಲ ಮಿತಿ ಎಷ್ಟು ? (ವಿವರ ನೀಡುವುದು)

## ಕೆ.ಎ.ಎಸ್. ನಿಂದ ಐ.ಎ.ಎಸ್. ಗೆ ಬಡ್ತಿ ಪಡೆದಿರುವ ಅಧಿಕಾರಿಗಳು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು):–**

೨೫೪ (೨೮೧) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕೆ.ಎ.ಎಸ್. ನಿಂದ ಐ.ಎ.ಎಸ್. ಗೆ ಬಡ್ತಿ ಪಡೆದುಕೊಂಡಿರುವ ಅಧಿಕಾರಿಗಳ ಸಂಖ್ಯೆ ಎಷ್ಟು; (ಹೆಸರು ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದ ಬಗ್ಗೆ ಮಾಹಿತಿಯನ್ನು ಒದಗಿಸುವುದು)

(ಆ) ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾದ ಪ್ರಸ್ತಾವನೆಗಳೆಷ್ಟು; ಆ ಪೈಕಿ ಕೇಂದ್ರದಿಂದ ಒಪ್ಪಿಗೆ ದೊರೆತ ಹಾಗೂ ತಿರಸ್ಕರಿಸಲಾದ ಪ್ರಸ್ತಾವನೆಗಳೆಷ್ಟು ? (ಪೂರ್ಣ ವಿವರಗಳನ್ನು ಒದಗಿಸುವುದು)

## ಪೊಲೀಸ್ ವ್ಯವಸ್ಥೆ ಆಧುನೀಕರಣ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು):–**

೨೫೫ (೨೮೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಇಂದಿನ ಪರಿಸ್ಥಿತಿಗನುಗುಣವಾಗಿ ಸಜ್ಜುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಕಳೆದ ಮೂರು ವರ್ಷಗಳಲ್ಲಿ ಪೊಲೀಸ್ ವ್ಯವಸ್ಥೆಯುನ್ನು ಆಧುನೀಕರಣಗೊಳಿಸಲು ಮೀಸಲಿಟ್ಟ ಹಣವೆಷ್ಟು; ಖರ್ಚು ಮಾಡಿದ ಹಣವೆಷ್ಟು; (ವರ್ಷಾವಾರು ಮಾಹಿತಿ ನೀಡುವುದು)

(ಇ) ಬೀದರ್ ಜಿಲ್ಲೆಯಲ್ಲಿ ಆಧುನೀಕರಣಗೊಳಿಸಲು, ಮೀಸಲಿಟ್ಟ / ಖರ್ಚು ಮಾಡಿದ ಹಣವೆಷ್ಟು? (ವರ್ಷಾವಾರು ಸಂಪೂರ್ಣ ವಿವರ ನೀಡುವುದು)

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಉತ್ತರಹಳ್ಳಿ ವಾರ್ಡ್ ೧೮೪ರಲ್ಲಿ ೧೦೦ ಹಾಸಿಗೆಗಳ ಆಸ್ಪತ್ರೆ ಮತ್ತು ಹೆರಿಗೆ ಆಸ್ಪತ್ರೆ ನಿರ್ಮಿಸುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–**

೨೫೬ (೩೦೯) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉತ್ತರಹಳ್ಳಿ ವಾರ್ಡ್ ೧೮೪ ಬೆಂಗಳೂರಿನ ಅತಿದೊಡ್ಡ ವಾರ್ಡ್‌ಗಳಲ್ಲಿ ಒಂದಾಗಿದ್ದು, ಕೂಲಿ ಕಾರ್ಮಿಕರು ಹೆಚ್ಚಿರುವ ವಾರ್ಡ್ ಇದಾಗಿದ್ದು, ಇಲ್ಲಿನ ನಿವಾಸಿಗಳ ಸಂಖ್ಯೆ ಒಂದು ಲಕ್ಷವನ್ನು ಮೀರಿದ್ದರೂ ಸಹ ಕೇವಲ ಪ್ರಾಥಮಿಕ ಆರೋಗ್ಯ ಕೇಂದ್ರವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಉತ್ತರಹಳ್ಳಿ ವಾರ್ಡ್ ಆರೇಹಳ್ಳಿ ಗ್ರಾಮದ ಸರ್ಕಾರಿ ಸರ್ವೆ ನಂಬರ್ ೨೮ ಅಥವಾ ಹತ್ತಿರದ ವಸಂತಪುರ ಗ್ರಾಮದ ಸರ್ವೆ ನಂಬರ್ ೫೫ರ ಸರ್ಕಾರಿ ಜಮೀನನ್ನು ಸದರಿ ಆಸ್ಪತ್ರೆಗಳಿಗೆಂದು ಮೀಸಲಿರಿಸಲು ಸಾಧ್ಯವೇ ;

(ಇ) ಇಲ್ಲಿ ಕನಿಷ್ಠ ನೂರು ಹಾಸಿಗೆಗಳ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಸ್ಪತ್ರೆ ಮತ್ತು ಸುಸಜ್ಜಿತ ಹೆರಿಗೆ ಆಸ್ಪತ್ರೆಯ ಅಗತ್ಯವಿದ್ದು

ಈ ಸಾಲಿನಲ್ಲಿಯೇ ಆಸ್ಪತ್ರೆಯನ್ನು ನಿರ್ಮಿಸುವ ಯೋಜನೆ ಪ್ರಾರಂಭಿಸಲು ಸರ್ಕಾರ ಮುಂದಾಗುವುದೇ ?

## ರಾಜ್ಯ ಸರ್ಕಾರಿ ನೌಕರರಿಗೆ ಏಳನೇ ವೇತನ ಆಯೋಗ ರಚನೆ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–**

೨೫೭ (೩೦೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಸರ್ಕಾರಿ ನೌಕರರಿಗೆ ಏಳನೇ ವೇತನ ಆಯೋಗ ರಚಿಸುವಲ್ಲಿ ಸರ್ಕಾರದ ನಿಲುವೇನು ;

(ಆ) ಕೇಂದ್ರ ಸರ್ಕಾರಿ ನೌಕರರಿಗೆ ನೀಡುತ್ತಿರುವಷ್ಟೆ ಸಮಾನ ವೇತನವನ್ನು ರಾಜ್ಯ ಸರ್ಕಾರದ ನೌಕರರಿಗೆ ನೀಡುವ ಬಗ್ಗೆ ಸರ್ಕಾರದ ನಿಲುವೇನು ;

(ಇ) ರಾಜ್ಯದಲ್ಲಿ ಕೆಲವು ನಗರಗಳ ಮನೆ ಬಾಡಿಗೆ ಭತ್ಯೆ ಪ್ರಮಾಣ ವರ್ಗೀಕರಣವಾಗಿಲ್ಲದಿರುವುದು ನಿಜವೇ ; ನಿಜವಾಗಿದ್ದಲ್ಲಿ, ಅವುಗಳ ಬಗ್ಗೆ ಸಂಕ್ಷಿಪ್ತ ವಿವರ ನೀಡುವುದು ;

(ಈ) ನೂತನ ಜಿಲ್ಲಾ ಕೇಂದ್ರಗಳ ಮನೆ ಬಾಡಿಗೆ ಭತ್ಯೆ ಪರಿಷ್ಕರಣೆಯಾಗಿದೆಯೇ ; ಇಲ್ಲವಾದಲ್ಲಿ, ಯಾವಾಗ ಮಾಡಲಾಗುವುದು ; ಯಾವ ಯಾವ ನೂತನ ಜಿಲ್ಲೆಗಳ ಭತ್ಯೆ ಪರಿಷ್ಕರಣೆ ಬಾಕಿಯಿರುತ್ತದೆ ?

## ಬೆಂಗಳೂರು ದಕ್ಷಿಣ ತಾಲ್ಲೂಕು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬನಶಂಕರಿಗೂ ಮತ್ತು ಕನಕಪುರ ಮುಖ್ಯ ರಸ್ತೆಯ ಕೋಣನಕುಂಟೆಯವರೆಗೂ ಸಂಪರ್ಕ ಕಲ್ಪಿಸುವ ರಸ್ತೆಗಳ ಅಭಿವೃದ್ಧಿ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–**

೨೫೮ (೩೦೭) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕೆಂಗೇರಿಯಿಂದ ಉತ್ತರಹಳ್ಳಿ ಮಾರ್ಗವಾಗಿ ಬನಶಂಕರಿಗೂ ಮತ್ತು ಕನಕಪುರ ಮುಖ್ಯ ರಸ್ತೆಯ ಕೋಣನಕುಂಟೆಗೂ ಸಂಪರ್ಕ ಕಲ್ಪಿಸುವ ಎರಡೂ ರಸ್ತೆಗಳು ಕಿರಿದಾಗಿದ್ದು ವಾಹನಗಳ ದಟ್ಟಣೆಯಿಂದಾಗಿ ಸಂಚಾರದಲ್ಲಿ ಅಸ್ಥವ್ಯಸ್ಥವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕನಕಪುರ ಮುಖ್ಯ ರಸ್ತೆಯಿಂದ ಮೈಸೂರು ಮುಖ್ಯರಸ್ತೆಗೆ ಸಂಪರ್ಕ ಕಲ್ಪಿಸುವ ಈ ರಸ್ತೆಯನ್ನು ಮೈಸೂರು ಮುಖ್ಯ ರಸ್ತೆಯ ಮಾದರಿಯಲ್ಲಿಯೇ ಅಗಲೀಕರಣಗೊಳಿಸಿ ಅಭಿವೃದ್ಧಿಪಡಿಸಿದ್ದಲ್ಲಿ, ವಾಹನ ದಟ್ಟಣೆಯ ಸಮಸ್ಯೆ ನಿವಾರಣೆಯಾಗುವುದರಿಂದ, ಈ ರಸ್ತೆಯ ಅಗಲೀಕರಣ ಅಥವಾ ಮೇಲ್ಸೇತುವೆ ನಿರ್ಮಿಸುವ ಬಗ್ಗೆ ಸರ್ಕಾರದ ನಿಲುವೇನು ;

(ಇ) ಈ ಕಾಮಗಾರಿಯನ್ನು ತುರ್ತಾಗಿ ಈ ಸಾಲಿನಲ್ಲಿಯೇ ಹಣ ಕಾಯ್ದಿರಿಸಿ ಪ್ರಾರಂಭಿಸಲು ಸರ್ಕಾರ ಮುಂದಾಗುವುದೇ ?

## ವಾರ್ಡ್ ನಂ. ೧೮೪ರಲ್ಲಿ ರಸ್ತೆಯನ್ನು ತುರ್ತು ಸಿಮೆಂಟ್ ಕಾಂಕ್ರೀಟ್ ರಸ್ತೆಯಾಗಿ ಅಭಿವೃದ್ಧಿಪಡಿಸುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–**

೨೫೫ (೩೦೮) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಉತ್ತರಹಳ್ಳಿ ವಾರ್ಡ್ ೧೮೪ರಲ್ಲಿ ಗುಂಡು ಮುನೇಶ್ವರ ದೇವಸ್ಥಾನದಿಂದ ಸುಬ್ರಹ್ಮಣ್ಯ ಮುಖ್ಯ ರಸ್ತೆವರೆಗೂ ದೊಡ್ಡ ಗುಂಡಿಗಳಾಗಿದ್ದು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ರಸ್ತೆಯು ವಸಂತಪುರದ ಸಪ್ತಗಿರಿ ಬಡಾವಣೆ, ಲಕ್ಷ್ಮಯ್ಯ ಬಡಾವಣೆ, ಮಾರುತಿ ಬಡಾವಣೆಗಳ ಸಂಪರ್ಕ ರಸ್ತೆಯಾಗಿದ್ದು ಸಾರ್ವಜನಿಕರಿಗೆ ಪ್ರಯಾಣಿಸಲು ಅನಾನುಕೂಲವಾಗಿರುವುದರಿಂದ ಸದರಿ ರಸ್ತೆಯನ್ನು ತುರ್ತು ಸಿಮೆಂಟ್ ಕಾಂಕ್ರೀಟ್ ರಸ್ತೆಯನ್ನಾಗಿ ನಿರ್ಮಿಸಬೇಕೆಂದು ಸಾರ್ವಜನಿಕರ ಬೇಡಿಕೆಯಿದ್ದು, ಈ ಕುರಿತು ಸರ್ಕಾರದ ನಿಲುವೇನು ;

(ಇ) ಸದರಿ ರಸ್ತೆಯ ಅಭಿವೃದ್ಧಿಗೆ ಸರ್ಕಾರವು ಏನು ಕ್ರಮ ಕೈಗೊಳ್ಳುವುದು ಹಾಗೂ ಬೇಕಾಗುವ ಕಾಲಾವಧಿ ಏನು ?

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬೋರ್ಡ್ ಮೀಟಿಂಗ್ ಮತ್ತು ನಿವೇಶನ ಹಂಚಿಕೆ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೬೦ (೨೨೮) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬೋರ್ಡ್ ಮೀಟಿಂಗ್ ಎಷ್ಟು ದಿನಗಳಿಗೊಮ್ಮೆ ನಡೆಯಲಿದೆ ; ಬೋರ್ಡ್ ಮೀಟಿಂಗ್‌ನಲ್ಲಿ ಹಾಜರಾಗುವ ಸದಸ್ಯರು ಯಾರು ; ಬೆಂಗಳೂರು ಅಭಿವೃದ್ಧಿಗೆ ಪ್ರಾಧಿಕಾರದ ಚುನಾಯಿತ ಪ್ರತಿನಿಧಿಗಳು ಇಲ್ಲವೇ ಅಥವಾ ಅಧಿಕಾರಿಗಳು ಮಾತ್ರವೇ ಚುನಾಯಿತ ಸದಸ್ಯರ ನಾಮಕರಣ ಇರುವುದಿಲ್ಲವೆ ; (ವಿವರ ನೀಡುವುದು)

(ಆ) ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ನಿವೇಶನ ಹಂಚಿಕೆಯಾದ ನಂತರ ನಿವೇಶನ ಆಕಾಂಕ್ಷಿಗಳು (ನಿವೇಶನಾದಾರರು) ಎದುರಿಸುತ್ತಿರುವ ಸಮಸ್ಯೆಗಳು ಬೆಂಗಳೂರು ಅಭಿವೃದ್ಧಿಗೆ ಪ್ರಾಧಿಕಾರದ ಗಮನಕ್ಕೆ ಬಂದಿರುವುದೇ ;

(ಇ) ಪ್ರಾರಂಭಿಕ ಠೇವಣಿಯ ನಂತರ ಪಾವತಿಸಬೇಕಾದ ಬಾಕಿ ಹಣಕ್ಕಾಗಿ ಜನರ ಬೇಡಿಕೆಯಂತೆ ಕಾಲಾವಕಾಶ ನೀಡಲಾಗುವುದೇ ;

(ಈ) ಈ ನಿವೇಶನಗಳನ್ನು ಮಾರುಕಟ್ಟೆ ದರದಲ್ಲಿಯೇ ಅಥವಾ ಮಾರುಕಟ್ಟೆ ದರಕ್ಕಿಂತ ಇನ್ನೂ ಹೆಚ್ಚಿನ ದರದಲ್ಲಿ ಹಂಚಿಕೆ ಮಾಡಲಾಗಿದೆಯೇ ;

(ಉ) ಜನರ ಬೇಡಿಕೆಯಂತೆ ಗುತ್ತಿಗೆ ಅವಧಿಯನ್ನು ಕೈಬಿಟ್ಟು ನೇರವಾಗಿ ಶುದ್ಧ ಕ್ರಯ ಪತ್ರವನ್ನು ನೀಡಲಾಗುವುದೇ ?

## ರಾಜ್ಯದಲ್ಲಿ ನಿವೃತ್ತ ಯೋಧರಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸದಿರುವ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೬೧ (೨೫೦) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಎಷ್ಟು ಜನ ನಿವೃತ್ತಿ ಹೊಂದಿರುವ ಯೋಧರಿದ್ದಾರೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಮಾಜಿ ಸೈನಿಕರ ವಿವರಗಳು ಇಲ್ಲದಿದ್ದಲ್ಲಿ, ಮಾಜಿ ಯೋಧರ ಪಟ್ಟಿ ಸಿದ್ಧಪಡಿಸುವಲ್ಲಿ ಸರ್ಕಾರದ ಕ್ರಮಗಳೇನು ;

(ಇ) ಯೋಧರು ನಿವೃತ್ತಿ ಹೊಂದಿದ ನಂತರ ರಾಜ್ಯ ಸರ್ಕಾರವು ಇವರಿಗೆ ನೀಡುವ ಸೌಲಭ್ಯಗಳೇನು ; (ವಿವರ ನೀಡುವುದು)

(ಈ) ಕಳೆದ ೫ ವರ್ಷಗಳಲ್ಲಿ ಈ ಸೌಲಭ್ಯಗಳನ್ನು ಪಡೆದ ಮಾಜಿ ಸೈನಿಕರೆಷ್ಟು ? (ಜಿಲ್ಲಾವಾರು ವಿವರ ನೀಡುವುದು)

## ರಾಜ್ಯದ ಗಡಿ ಭಾಗಗಳಲ್ಲಿ ಸುರಕ್ಷಿತಾ ಚೆಕ್‌ಪೋಸ್ಟ್‌ಗಳು ಇಲ್ಲದಿರುವ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೬೨ (೨೫೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಅಂತರ್ ರಾಜ್ಯ ಗಡಿಭಾಗಗಳಲ್ಲಿರುವ ಪೊಲೀಸ್ ತಪಾಸಣಾ ಘಟಕ (ಚೆಕ್‌ಪೋಸ್ಟ್)ಗಳ ಸಂಖ್ಯೆ ಎಷ್ಟು ; ಹಾಗೂ ಎಲ್ಲೆಲ್ಲಿ ಇವೆ ; (ಇಲ್ಲಿರುವ ಸಿಬ್ಬಂದಿಗಳ ಸಂಖ್ಯೆಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಚೆಕ್‌ಪೋಸ್ಟ್‌ಗಳ ನಿರ್ಮಾಣದ ಉದ್ದೇಶಗಳೇನು ; (ವಿವರ ನೀಡುವುದು)

(ಇ) ಕೊಡಗು ಜಿಲ್ಲೆಯ ಅಂತರ್ ರಾಜ್ಯ ಗಡಿಭಾಗಗಳಾದ ಕುಟ್ಟ, ಮಾಕುಟ್ಟಗಳಲ್ಲಿ ಪೊಲೀಸ್ ತಪಾಸಣಾ ಘಟಕ (ಚೆಕ್‌ಪೋಸ್ಟ್)ಗಳು ಇವೆಯೇ ; ಇಲ್ಲದಿದ್ದಲ್ಲಿ, ಕಾರಣವೇನು ; ಇದ್ದಲ್ಲಿ, ಇಲ್ಲಿನ ಸಿಬ್ಬಂದಿಗಳ ಸಂಖ್ಯೆ ಎಷ್ಟು ? (ವಿವರ ನೀಡುವುದು)

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಫ್ಲಾಟ್‌ಗಳ ನಿರ್ಮಾಣ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೬೩ (೨೫೧) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿಸಲಾದ ಫ್ಲಾಟ್‌ಗಳ ಸಂಖ್ಯೆ ಎಷ್ಟು; ಹಂಚಿಕೆ ಮಾಡಲಾದ ಫ್ಲಾಟ್‌ಗಳ ಸಂಖ್ಯೆ ಎಷ್ಟು ಮತ್ತು ಎಲ್ಲೆಲ್ಲಿ ನಿರ್ಮಿಸಲಾಗಿದೆ ; (ಪೂರ್ಣ ವಿವರ ನೀಡುವುದು)

(ಆ) ಇವುಗಳಿಗೆ ನಿಗಧಿಪಡಿಸಲಾದ ದರವೆಷ್ಟು; ಈ ಫ್ಲಾಟ್‌ಗಳ ಜೀವಿತಾವಧಿ ಎಷ್ಟು; (ಕೊಠಡಿಗಳವಾರು ವಿವರ ನೀಡುವುದು)

(ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಫ್ಲಾಟ್‌ಗಳ ನಿರ್ಮಾಣ ಹಾಗೂ ಬಡಾವಣೆಗಳ ನಿರ್ಮಾಣದ ಮುಂದಿನ ಯೋಜನೆಗಳೇನು ? (ವಿವರ ನೀಡುವುದು)

# ಸಹಕಾರ ಪತ್ತಿನ ಬ್ಯಾಂಕ್‌ಗಳಲ್ಲಿ ನಕಲಿ ಭೂ ದಾಖಲೆಗಳನ್ನು ಅಡಮಾನ ಇಟ್ಟುಕೊಂಡಿರುವ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೬೪ (೨೫೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಹಕಾರ ಪತ್ತಿನ ಬ್ಯಾಂಕ್‌ಗಳಲ್ಲಿ ನಕಲಿ ಭೂ ದಾಖಲೆಗಳನ್ನು ಅಡಮಾನ ಇಟ್ಟುಕೊಂಡು ನೂರಾರು ಕೋಟಿ ರೂಪಾಯಿ ಸಾಲ ಪಡೆದು ಮೋಸ ಮಾಡಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆಯೇ ;

(ಆ) ಈ ಅಕ್ರಮದಲ್ಲಿ ಬ್ಯಾಂಕ್ ಅಧಿಕಾರಿಗಳು ಶಾಮೀಲಾಗಿರುವುದು ನಿಜವೇ ;

(ಇ) ಸಹಕಾರಿ ಬ್ಯಾಂಕ್‌ಗಳಲ್ಲಿ ನಕಲಿ ದಾಖಲೆ ಅಡವಿಟ್ಟು ಕೋಟ್ಯಾಂತರ ರೂಪಾಯಿ ಲಪಟಾಯಿಸಿರುವ ಎಷ್ಟು ಮಂದಿ ವಂಚಕರ ಮೇಲೆ ಕ್ರಮ ಕೈಗೊಳ್ಳಲಾಗಿದೆ ; (ವಿವರ ನೀಡುವುದು)

(ಈ) ರಾಜ್ಯದಲ್ಲಿ ಎಲ್ಲೆಲ್ಲಿ ಈ ವಂಚನೆ ನಡೆದಿದೆ ; (ಜಿಲ್ಲಾವಾರು ವಿವರ ನೀಡುವುದು)

(ಉ) ಈ ರೀತಿ ಜನರಿಗೆ ಸಹಕಾರ ಪತ್ತಿನ ಬ್ಯಾಂಕ್‌ಗಳಿಂದ ಮೋಸವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಬಂದಿದ್ದರೆ, ಸರ್ಕಾರ ತೆಗೆದುಕೊಂಡ ಕ್ರಮವೇನು ?

## ನಗರೋತ್ಥಾನ ಯೋಜನೆ ಕುರಿತು

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೬೫ (೨೫೪) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನಗರೋತ್ಥಾನ ಯೋಜನೆಯ ಮಾನದಂಡವೇನು ;

(ಆ) ಯೋಜನೆಯನ್ನು ಎಷ್ಟು ಹಂತದಲ್ಲಿ ಆರಂಭಿಸಲಾಗುತ್ತದೆ ; ಸದರಿ ಯೋಜನೆಗಳಿಗೆ ಮಂಜೂರಾದ ಹಣವೆಷ್ಟು ;

(ಇ) ಎಷ್ಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಈ) ಇಲ್ಲಿಯವರೆಗೆ ಎಷ್ಟು ಕಾಮಗಾರಿ ಪೂರ್ಣಗೊಂಡಿದೆ ; ಬಾಕಿ ಇರುವ ಕಾಮಗಾರಿಗಳ ಸಂಖ್ಯೆ ಎಷ್ಟು ; ಕಾರಣವೇನು ? (ವಿವರ ನೀಡುವುದು)

## ಮಳೆ ನೀರು ಕಾಲುವೆಗಳ ಸರ್ವೆ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೬೬ (೨೫೬) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ೬೯ನೇ ವಾರ್ಡ್‌ನ ಮಳೆ ನೀರು ಕಾಲುವೆಗಳನ್ನು ಯಾವ ಯಾವ ವರ್ಷಗಳಲ್ಲಿ ಸರ್ವೆ ಮಾಡಲಾಯಿತು ; ಹಾಗೂ ಸರ್ವೆ ಮಾಡಿದ ಅಧಿಕಾರಿ / ನೌಕರರು ಯಾರು ಯಾರು ;

(ಆ) ಮೇಲ್ಕಂಡ ಇತ್ತೀಚಿನ ಸರ್ವೆ ನಂ. ೯೧, ೯೨, ೯೩, ೯೪ ಹಾಗೂ ೨೮ ಇತ್ತೀಚಿನ ಏರಿಯಾ ಸ್ಟೇಟ್‌ಮೆಂಟ್ ಹಾಗೂ ನಕ್ಷೆಯ ಪ್ರತಿಗಳನ್ನು ಒದಗಿಸುವುದು ?

## ಖಾಲಿ ಇರುವ ಸರ್ಕಾರಿ ಜಾಗಗಳ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು):–**

೨೬೭ (೨೫೭) ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನ ಬಸವನಗುಡಿ ವಿಧಾನಸಭಾ ಕ್ಷೇತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಗೆ ಬರುವ ಸರ್ಕಾರಿ ಜಾಗಗಳ ಸಂಖ್ಯೆ ಎಷ್ಟು ; (ಅವುಗಳ ವಿಳಾಸ ಸಹಿತ ಮಾಹಿತಿ ಒದಗಿಸುವುದು)

(ಆ) ಆ ಪೈಕಿ ಯಾವ ಯಾವ ಜಾಗಗಳನ್ನು ಸರ್ಕಾರದ ವತಿಯಿಂದ ಉಪಯೋಗಿಸಲ್ಪಟ್ಟಿದೆ ;

(ಇ) ಖಾಸಗಿ ಸಂಘ ಸಂಸ್ಥೆಗಳಿಗೆ ಜಾಗವನ್ನು ಗುತ್ತಿಗೆ ನೀಡಲಾಗಿದೆಯೇ ; (ವಿವರ ನೀಡುವುದು)

(ಈ) ಈ ಸಂಘ ಸಂಸ್ಥೆಗಳಿಂದ ಸರ್ಕಾರಕ್ಕೆ ಬರುವ ಆದಾಯವೆಷ್ಟು ? (ಸಂಪೂರ್ಣ ಮಾಹಿತಿ ನೀಡುವುದು)

## ಸಂಚಾರ ನಿಯಮ ಉಲ್ಲಂಘಿಸುವ ಚಾಲಕರ ವಿರುದ್ಧ ಕ್ರಮ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು):–**

೨೬೮ (೨೯೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮದ್ಯಪಾನ ಮಾಡಿ ಶಾಲಾ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ ಇತ್ತೀಚೆಗೆ ಬೆಂಗಳೂರು ನಗರದ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿದ್ದಾರೆಯೇ ;

(ಆ) ಹಾಗಿದ್ದಲ್ಲಿ, ಸಂಚಾರ ನಿಯಮಗಳನ್ನು ಉಲ್ಲಂಘಿಸಿದ ಆರೋಪದ ಮೇಲೆ ಎಷ್ಟು ಜನರ ವಿರುದ್ಧ ಕೇಸುಗಳನ್ನು ದಾಖಲಿಸಲಾಗಿದೆ ;

(ಇ) ವಿಶೇಷ ಕಾರ್ಯಾಚರಣೆ ಸಂದರ್ಭದಲ್ಲಿ ಕಂಡು ಬಂದ ಸಂಚಾರ ನಿಯಮ ಉಲ್ಲಂಘನೆಗಳ ವಿಧಗಳಾವುವು ;

(ಈ) ಈ ಬಗ್ಗೆ ಶಾಲಾ ಆಡಳಿತ ಮಂಡಳಿ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆಯೇ ? (ವಿವರಗಳನ್ನು ನೀಡುವುದು)

## ಯಮನೂರಿನ ರೈತರ ಮೇಲಿನ ದೌರ್ಜನ್ಯ ಕುರಿತು

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು):–**

೨೬೯ (೨೯೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಮಧ್ಯಂತರ ಅರ್ಜಿಯನ್ನು ಮಹದಾಯಿ ನ್ಯಾಯ ಮಂಡಳಿ ತಿರಸ್ಕರಿಸಿದ್ದನ್ನು ಪ್ರತಿಭಟಿಸುತ್ತಿದ್ದ ವೇಳೆ ಯಮನೂರಿನ ರೈತರ ಮೇಲೆ ಪೊಲೀಸರು ದೌರ್ಜನ್ಯ ನಡೆಸಿದ್ದು ನಿಜವೇ;

(ಆ) ಈ ರೀತಿ ಪೊಲೀಸರು ರೈತರ ಮೇಲೆ ದೌರ್ಜನ್ಯ ನಡೆಸಲು ಕಾರಣವೇನು; ಇದರಿಂದಾಗಿ ತೊಂದರೆಗೊಳಗಾದ ರೈತರ ಸಂಖ್ಯೆ ಎಷ್ಟು; ಸದರಿಯವರಿಗೆ ಇದುವರೆಗೂ ಏನು ಪರಿಹಾರ ನೀಡಲಾಗಿದೆ;

(ಇ) ರೈತರ ಮೇಲೆ ದೌರ್ಜನ್ಯವೆಸಗಿದ ಪೊಲೀಸರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮವೇನು;

(ಈ) ಯಮನೂರಿನ ರೈತರ ವಿರುದ್ಧ ಪ್ರಕರಣಗಳನ್ನು ಅನಗತ್ಯವಾಗಿ ದಾಖಲಿಸಲಾಗಿದೆಯೇ; ಈ ಪ್ರಕರಣಗಳನ್ನು ಹಿಂಪಡೆಯಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ;

(ಉ) ಯಮನೂರಿನಲ್ಲಿ ರೈತರ ಮೇಲೆ ದೌರ್ಜನ್ಯವೆಸಗಿದ ಪ್ರಕರಣದ ಬಗ್ಗೆ ರಾಜ್ಯ ಮಾನವ ಹಕ್ಕುಗಳ ಆಯೋಗವಾಗಲಿ ಅಥವಾ ಪೊಲೀಸ್ ದೂರು ಪ್ರಾಧಿಕಾರವಾಗಲಿ ಸ್ವಯಂಪ್ರೇರಿತವಾಗಿ ದೂರನ್ನು ದಾಖಲಿಸಿಕೊಂಡಿದೆಯೇ; ದಾಖಲಿಸಕೊಂಡಿಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು?

## ಬೀದರ್ ನಗರದಲ್ಲಿ ಅನುಷ್ಠಾನಗೊಳ್ಳುತ್ತಿರುವ ಒಳಚರಂಡಿ ಕಾಮಗಾರಿ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೭೦ (೩೦೫) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ನಗರದಲ್ಲಿ ಅನುಷ್ಠಾನಗೊಳಿಸುತ್ತಿರುವ ಒಳಚರಂಡಿ ಕಾಮಗಾರಿ ಮಂಜೂರು ಆಗಿದ್ದು ಯಾವಾಗ ಅಂದಾಜು

ವೆಚ್ಚ ಎಷ್ಟು ; ಇಲ್ಲಿಯವರೆಗೆ ಎಷ್ಟು ಕಾಮಗಾರಿ ಪೂರ್ಣಗೊಂಡಿದೆ; ಕಾಮಗಾರಿ ಪೂರ್ಣಗೊಳ್ಳುವುದು ಯಾವಾಗ (ವಿವರ ನೀಡುವುದು)

(ಆ) ಬೀದರ್ ನಗರದಲ್ಲಿ ೨೪x೭ ಕುಡಿಯುವ ನೀರು ಪೂರೈಕೆ ಯೋಜನೆ ಮಂಜೂರು ಆಗಿದ್ದು ಯಾವಾಗ; ಯಾವ ಯೋಜನೆಗೆ ಅತಿ ಹೆಚ್ಚು ಅನುದಾನ ಮಂಜೂರು ಆಗಿದೆ; ಇಲ್ಲಿಯವರೆಗೆ ಎಷ್ಟು ಹಣ ವೆಚ್ಚವಾಗಿದೆ; ಕಾಮಗಾರಿ ಪೂರ್ಣಗೊಂಡಿದೆಯೇ;

(ಇ) ಬೀದರ್ ನಗರದ ಯಾವ ಯಾವ ಬಡಾವಣೆಗಳಲ್ಲಿ ನೀರು ಪೂರೈಕೆ ಆರಂಭವಾಗಿದೆ; ಈ ಯೋಜನೆ ಯಾವಾಗ ಪೂರ್ಣಗೊಳ್ಳುವುದು?

## ಬೀದರ್ ಜಿಲ್ಲೆಯ ಪೊಲೀಸ್ ವಸತಿ ಗೃಹಗಳ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೭೧ (೩೦೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿ ಪೊಲೀಸ್ ವಸತಿ ಗೃಹಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಆ) ಈ ಜಿಲ್ಲೆಯಲ್ಲಿ ವಸತಿ ಗೃಹಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆಯೇ;

(ಇ) ಎಷ್ಟು ಪೊಲೀಸ್ ವಸತಿ ಗೃಹಗಳು ಇವೆ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಬೀದರ್ ಜಿಲ್ಲೆಯಲ್ಲಿ ಇರುವ ಪೊಲೀಸ್ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಹಾಗೂ ಈ ಜಿಲ್ಲೆಯಲ್ಲಿ ಪೊಲೀಸ್ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಸರ್ಕಾರ ಕೈಗೊಂಡ ಕ್ರಮಗಳೇನು?

## ಕರ್ನಾಟಕ ಕೆಟಿಟಿಪಿ ಆಕ್ಟ್ ಅನ್ವಯ ವಿನಾಯಿತಿ ಪಡೆಯುವ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನ ಸಭೆಯಿಂದ ಚುನಾಯಿತರಾದವರು):–**

೨೭೨ (೨೫೯) ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(a) Has any Department, Corporations, Boards applies to the Government seeking exemption under 4G of Karnataka KTTP Act;

(b) What is the reason for seeking exemption under 4G of Karnataka KTTP Act;

(c) How many applications have been received, so far since 2010 January;

(d) Give details of Departments, Boards and Corporations whose applications for exemptions have been rejected?

## ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಗನ್‌ಗಳನ್ನು ನೀಡಿರುವ ಬಗ್ಗೆ

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನ ಸಭೆಯಿಂದ ಚುನಾಯಿತರಾದವರು):–**

೨೭೩ (೨೫೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪೊಲೀಸ್ ಇಲಾಖೆಯಲ್ಲಿ ಎಷ್ಟು ಜನ ಅಧಿಕಾರಿಗಳಿಗೆ ಆಯುಧಗಳನ್ನು (ಗನ್) ನೀಡಲಾಗಿದೆ;

(ಆ) ಯಾವ ಶ್ರೇಣಿಯ ಅಧಿಕಾರಿಗಳಿಗೆ ಯಾವ ರೀತಿಯ ಆಯುಧಗಳನ್ನು ನೀಡಲಾಗಿದೆ; (ಶ್ರೇಣಿ ಮತ್ತು ಗನ್‌ಗಳ ವಿವರ ನೀಡುವುದು)

(ಇ) ಈ ಗನ್‌ಗಳ ಸರಾಸರಿ ಬಳಕೆಯ ಪ್ರಮಾಣ ಎಷ್ಟು ಮತ್ತು ಗನ್‌ಗಳ ಕಾಲಾವಧಿ ಎಷ್ಟು; ಕಾಲಾವಧಿ ಮುಗಿದ ಗನ್‌ಗಳ ವಿಲೇವಾರಿಯನ್ನು ಹೇಗೆ ಮಾಡಲಾಗುತ್ತದೆ; (ವಿವರ ನೀಡುವುದು)

(ಈ) ಪ್ರಸ್ತುತ ಅಧಿಕಾರಿಗಳು ಬಳಸುತ್ತಿರುವ ಗನ್‌ಗಳು ಎಷ್ಟು ವರ್ಷ ಹಳೆಯದಾಗಿರುತ್ತದೆ; ಮತ್ತು ಅವುಗಳನ್ನು ಉನ್ನತೀಕರಿಸುವ ಪ್ರಸ್ತಾವ ಇದೆಯೇ; (ವಿವರ ನೀಡುವುದು)

## ಅಪೆಕ್ಸ್ ಬ್ಯಾಂಕ್ ಸಾಲ ನೀಡುವ ಕುರಿತು

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೭೪ (೨೬೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನಿಂದ ರಾಜ್ಯದ ಯಾವ ಯಾವ ಸಕ್ಕರೆ ಕಾರ್ಖಾನೆಗಳಿಗೆ ಸಕ್ಕರೆಯನ್ನು ಅಡಮಾನ ಇಟ್ಟುಕೊಂಡು ಸಾಲ ನೀಡಲಾಗಿದೆ; (ಕಾರ್ಖಾನೆವಾರು ವಿವರ ಒದಗಿಸುವುದು)

(ಆ) ಇಲ್ಲಿಯವರೆಗೆ ಬಿಡುಗಡೆಗೊಳಿಸಿದ ಮೊತ್ತವೆಷ್ಟು; (ಕಾರ್ಖಾನೆವಾರು ಮಾಹಿತಿ ಒದಗಿಸುವುದು)

(ಇ) ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನಿಂದ ರಾಜ್ಯದ ಯಾವ ಯಾವ ಸಕ್ಕರೆ ಕಾರ್ಖಾನೆಗಳ ಮದ್ಯಸಾರ (ಡಿಸ್ಟಲರಿ) ಘಟಕ ಸ್ಥಾಪನೆಗೆ ಸಾಲ ನೀಡಲಾಗಿದೆ; ಸಾಲದ ಮೊತ್ತವೆಷ್ಟು;

(ಈ) ಸಾಲ ಮಂಜೂರಾತಿಗಾಗಿ ಯಾವ ಯಾವ ಪ್ರಮಾಣಪತ್ರಗಳನ್ನು ಪಡೆಯಲಾಗಿದೆ? (ವಿವರ ಒದಗಿಸುವುದು)

## ಅಪೆಕ್ಸ್ ಬ್ಯಾಂಕ್ ಸಾಲ ನೀಡುವ ಕುರಿತು

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೭೫ (೨೬೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನಿಂದ ರಾಜ್ಯದ ಯಾವ ಯಾವ ಸಕ್ಕರೆ ಕಾರ್ಖಾನೆಗಳಿಗೆ ಎಷ್ಟೆಷ್ಟು ಸಾಲ ನೀಡಿದೆ; ಯಾವ ಯಾವ ರೀತಿಯ ಸಾಲಗಳನ್ನು ನೀಡಿದೆ; (ಅಲ್ಪಾವಧಿ, ದೀರ್ಘಾವಧಿ ಇತ್ಯಾದಿ ವಿವರಗಳನ್ನು ಕಾರ್ಖಾನೆವಾರು ನೀಡುವುದು)

(ಆ) ಮಂಜೂರಿಸಿದ ಮೊತ್ತದಲ್ಲಿ ಈಗಾಗಲೇ ಬಿಡುಗಡೆ ಮಾಡಲಾದ ಮೊತ್ತವೆಷ್ಟು?

## ರಾಜ್ಯದಲ್ಲಿರುವ ಸಹಕಾರ ಸಂಘಗಳಿಂದ ಪಡೆದಿರುವ ಸಾಲ ಮನ್ನಾ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೭೬ (೨೮೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಭೀಕರ ಬರಗಾಲವಿರುವುದರಿಂದ ರಾಜ್ಯದ ರೈತರು ೨೦೧೬ನೇ ಸಾಲಿನ ಡಿಸೆಂಬರ್ ತನಕ ವ್ಯವಸಾಯ ಸೇವಾ ಸಹಕಾರ ಬ್ಯಾಂಕುಗಳಿಂದ ಮತ್ತು ಇತರೆ ಬ್ಯಾಂಕುಗಳಿಂದ ಪಡೆದ ಸಾಲವನ್ನು ಮನ್ನಾ ಮಾಡಲಾಗುವುದೇ;

(ಆ) ರಾಜ್ಯದಲ್ಲಿರುವ ರೈತರು ಇಲ್ಲಿಯ ತನಕ ಸಹಕಾರ ಸಂಘಗಳಿಂದ ಮತ್ತು ಬ್ಯಾಂಕುಗಳಿಂದ ಪಡೆದಿರುವ ಕೃಷಿ ಸಾಲದ ಮೊತ್ತವೆಷ್ಟು; (ಸಹಕಾರ ಮತ್ತು ಇತರೆ ಬ್ಯಾಂಕ್‌ಗಳು ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳ ಪಟ್ಟಿಯನ್ನು ಪ್ರತ್ಯೇಕವಾಗಿ ನೀಡುವುದು)

(ಇ) ತುಮಕೂರು ಜಿಲ್ಲೆಯಾದ್ಯಂತ ರೈತರು ವ್ಯವಸಾಯ ಸೇವಾ ಸಹಕಾರ ಬ್ಯಾಂಕುಗಳಿಂದ/ರಾಷ್ಟ್ರೀಕೃತ/ ಇತರೆ ಬ್ಯಾಂಕುಗಳಿಂದ ಪಡೆದಿರುವ ಒಟ್ಟು ಸಾಲದ ಮೊತ್ತವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ರಾಜ್ಯ ಭೀಕರ ಬರಗಾಲ ಎದುರಿಸುತ್ತಿರುವುದರಿಂದ ರೈತರಿಗೆ ಇಲ್ಲಿಯು ತನಕ ಯಾವುದೇ ಬೆಳೆ ಬಾರದೆ ಇರುವುದರಿಂದ ರೈತರ ಹಿತದೃಷ್ಟಿಯಿಂದ ಸಂಪೂರ್ಣ ಸಾಲವನ್ನು ಮನ್ನಾ ಮಾಡಲು ಸರ್ಕಾರ ಘೋಷಣೆ ಮಾಡುವುದೇ? (ಸ್ಪಷ್ಟಪಡಿಸುವುದು)

## ತುಮಕೂರು ಮಹಾನಗರ ಪಾಲಿಕೆ ರಸ್ತೆಗಳ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೭೭ (೨೮೩) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುಮಕೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಬರುವ ೬ನೇ ವಾರ್ಡ್‌ನ ಜನತಾ ಕಾಲೋನಿ ನಿವಾಸಿಗಳು ಮೂಲ

ಸೌಕರ್ಯಗಳಿಲ್ಲದೆ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಆ) ಕುಡಿಯುವ ನೀರು, ರಸ್ತೆ ಚರಂಡಿ, ಬೀದಿ ದೀಪಗಳು ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡಲು ರಸ್ತೆ ಸಂಚಾರ ತಡೆದು ಪಾಲಿಕೆ ಎದುರು ಪ್ರತಿಭಟನೆ ಮಾಡಿದ ನಂತರ ಸರ್ಕಾರ ತೆಗೆದುಕೊಂಡಿರುವ ವಿವಿಧ ಕಾಮಗಾರಿಗಳಾವುವು ಮತ್ತು ಒದಗಿಸಿರುವ ಮೂಲಭೂತ ಸೌಲಭ್ಯಗಳಾವುವು (ವಿವರ ಒದಗಿಸುವುದು)

(ಇ) ಎರಡು ವಿಭಾಗವಾಗಿರುವ ೬ನೇ ವಾರ್ಡ್‌ಗೆ ದಿಬ್ಬೂರು, ದಿಬ್ಬೂರು ಜನತಾ ಕಾಲೋನಿ ಸೇರಿದ್ದು, ದಿಬ್ಬೂರಿನಲ್ಲಿ ಅಷ್ಟಿಷ್ಟು ಅಭಿವೃದ್ಧಿ ಕೆಲಸಗಳು ಅಗುತ್ತಿವೆ; ಆದರೆ, ಪರಿಶಿಷ್ಟರು ಮತ್ತು ಬಡವರು ವಾಸಿಸುವ ದಿಬ್ಬೂರು ಕಾಲೋನಿ ನಾಗರೀಕರಿಗೆ ಯಾವುದೇ ನಾಗರೀಕ ಸೌಲಭ್ಯಗಳನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ;

(ಈ) ಒಟ್ಟಾರೆಯಾಗಿ ಯಾವಾಗ ಆ ಕಾಲೋನಿಗೆ ಅಭಿವೃದ್ಧಿ ಕೆಲಸಗಳು ಮತ್ತು ಮೂಲ ಸೌಲಭ್ಯಗಳನ್ನು ಒದಗಿಸಲಾಗುವುದು?

## ತುಮಕೂರು ನಗರವನ್ನು ಸ್ಮಾರ್ಟ್ ಸಿಟಿ ಎಂದು ಘೋಷಿಸಿರುವ ಬಗ್ಗೆ

**ಶ್ರೀ ಕಾಂತರಾಜು (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೭೮ (೨೮೫) ಮಾನ್ಯ ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುಮಕೂರು ನಗರವನ್ನು ಸ್ಮಾರ್ಟ್ ಸಿಟಿ ಎಂದು ಕೇಂದ್ರ ಸರ್ಕಾರ ಘೋಷಣೆ ಮಾಡಿದೆಯೆ;

(ಆ) ಹಾಗಿದ್ದಲ್ಲಿ, ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ತುಮಕೂರು ನಗರಕ್ಕೆ ಬಂದಿರುವ ಅನುದಾನವೆಷ್ಟು; (ವಿವರ ನೀಡುವುದು)

(ಇ) ಬಂದಂತಹ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ; ಈ ಕಾಮಗಾರಿಗಳಿಗೆ ಖರ್ಚು ಮಾಡುತ್ತಿರುವ ಹಣವೆಷ್ಟು; (ಪ್ರತಿಯೊಂದಕ್ಕೂ ವಿವರಣೆ ನೀಡುವುದು)

(ಈ) ಸ್ಮಾರ್ಟ್ ಸಿಟಿ ಯೋಜನೆಗೆ ಕೇಂದ್ರ ಸರ್ಕಾರ ಕಳುಹಿಸಿರುವ ಆದೇಶ/ಸುತ್ತೋಲೆ/ಅಧಿಸೂಚನೆಗಳನ್ನು ಮರೆಮಾಚಿ ಸ್ವಇಚ್ಛೆಯಿಂದ ಮಹಾನಗರ ಪಾಲಿಕೆ ಕ್ರಿಯಾ ಯೋಜನೆ ತಯಾರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಉ) ಯಾವುದೇ ಒಂದು ಯೋಜನೆಯನ್ನು ತಯಾರಿಸುವ ಮುನ್ನ ಜನ ಪ್ರತಿನಿಧಿಗಳನ್ನು/ಸಂಘ ಸಂಸ್ಥೆಯ ಮುಖ್ಯಸ್ಥರು/ಆಡಳಿತಾತ್ಮಕ ಅನುಭವವುಳ್ಳ ವ್ಯಕ್ತಿಗಳೊಂದಿಗೆ ಸಮಾಲೋಚನೆ ಮಾಡದೆ, ಅಲ್ಲಿನ ಆಯುಕ್ತರು ನಿರ್ಲಕ್ಷ ತಾಳಿರುವುದು ಸರ್ಕಾರ ಗಮನಿಸಿದೆಯೇ; (ವಿವರಣೆ ನೀಡುವುದು)

(ಊ) ನಗರ ಪಾಲಿಕೆಯಲ್ಲಿ ಸ್ಮಾರ್ಟ್ ಸಿಟಿ ಯೋಜನೆಗೆ ಎಷ್ಟು ವಾರ್ಡ್‌ಗಳನ್ನು ಸೇರ್ಪಡೆ ಮಾಡಿಕೊಳ್ಳಲಾಗಿದೆ; ಹಾಗೂ ಈ ವಾರ್ಡ್‌ಗಳಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು?

**ಶ್ರೀನಿವಾಸ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. 0247/800 ಪ್ರತಿಗಳು/06–02–2017